ಕರ್ನಾಟಕ ವಿಧಾನ ಸಭೆ

ಬುಧವಾರ, ದಿನಾಂಕ: 3ನೇ ಮಾರ್ಚ್, 2010ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11 ಗಂಟೆ 10 ನಿಮಿಷಗಳಿಗೆ ಸಮಾವೇಶಗೊಂಡಿತು.

ಅಧ್ಯಕ್ಷರು ಶ್ರೀ ಕೆ.ಜಿ. ಬೋಪಯ್ಯರವರು

ಪೀಠವನ್ನು ಅಲಂಕರಿಸಿದರು.

1. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ :

ವಿಷಯ : Electricity ಯಲ್ಲಿ high cost current ಖರೀದಿ ಮಾಡಿದ್ದರ ಬಗ್ಗೆ ಸ್ಟೇಟ್‌ಮೆಂಟ್ ಮಾಡಲು ಅನುಮತಿ ಕೋರಿಕೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ನಾವು ನಿಲುವಳಿ ಸೂಚನೆಯೊಂದನ್ನು ಕೊಟ್ಟಿದ್ದೇವೆ. ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು : ನಿನ್ನೆ ನಿಲುವಳಿ ಸೂಚನೆ ಕೊಟ್ಟಿದ್ದೀರಿ.

ಶ್ರೀ ಹೆಚ್.ಡಿ.ರೇವಣ್ಣ : ನಿನ್ನೆ ಕೊಟ್ಟಿರುವ ನಿಲುವಳಿ ಸೂಚನೆಯಲ್ಲ. ಇವತ್ತು electricity ಯಲ್ಲಿ high cost current ಖರೀದಿ ಮಾಡಿ .....

(ಗೊಂದಲ)

ಅಧ್ಯಕ್ಷರು : ದಯವಿಟ್ಟು ನಾನು ಹೇಳುವುದನ್ನು ಕೇಳಿ. ತಾವು ಏನು ಕೊಟ್ಟಿದ್ದೀರಿ, already ಅದನ್ನು grounds ಹೇಳಿ ನಾನು ತಿರಸ್ಕಾರ ಮಾಡಿದ್ದೇನೆ. ಮತ್ತೆ ಅದನ್ನು ಪ್ರಸ್ತಾಪಿಸಲಿಕ್ಕೆ ಅವಕಾಶವಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ : ನಿನ್ನೆ ತಾವು ಸದನದಲ್ಲಿ ಏನು ಹೇಳಿದಿರಿ, ಅದರಂತೆ ಮಾಡಿದ್ದೇವೆ....

(ಗೊಂದಲ)

ಅಧ್ಯಕ್ಷರು : ತಾವು ಏನನ್ನು ಹೇಳಬೇಕೋ, ಅದನ್ನು ಹೇಳಿದ್ದೀರಿ, ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನೂ ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ನಿನ್ನೆ Parliamentary Affairs Minister Rule 60ನಲ್ಲಿ ಇದನ್ನು ತೆಗೆದುಕೊಳ್ಳೋಣ ಎಂದು ಹೇಳಿದ್ದರು. ಅದರ ಪ್ರಕಾರ ನೋಟೀಸ್ ಕೊಟ್ಟಿದ್ದೇವೆ.

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ರೇವಣ್ಣನವರೆ, ನಾನು ನಿನ್ನೆಯಿಂದ ನೋಡುತ್ತಿದ್ದೇನೆ. ನೀವು ಮತ್ತೆ ಮತ್ತೆ ಇದನ್ನೇ ಪ್ರಸ್ತಾಪ ಮಾಡುತ್ತಿದ್ದೀರಿ. ನಾನು Rule 60ರಲ್ಲಿ ಇದನ್ನು ತೆಗೆದುಕೊಳ್ಳೋಣ ಎಂದು ಹೇಳಲಿಲ್ಲ. ಇದನ್ನು ಬೇರೆ ರೂಪದಲ್ಲಿ ತನ್ನಿ ಎಂದು ಮಾತ್ರ ಹೇಳಿದೆ. ರೂಲ್ 60ರಲ್ಲಿ ಪ್ರಸ್ತಾಪಿಸಬೇಕಾದರೆ, ಇತ್ತೀಚೆಗೆ ಸಂಭವಿಸಿದ ಒಂದು ಘಟನೆಯಾಗಿರಬೇಕು. ಆದರೆ ಇವರು ಇಲ್ಲಿ ಬಹಳ ದೊಡ್ಡ statement ಅನ್ನೇ ಮಾಡಲಿಕ್ಕೆ ಹೊರಟಿದ್ದಾರೆ. ಇದು ಯಾವುದೇ ಕಾರಣಕ್ಕೂ ರೂಲ್ 60ರ ಅಡಿಯಲ್ಲಿ ಪ್ರಸ್ತಾಪಿಸಲಿಕ್ಕೆ ಬರುವುದಿಲ್ಲ. ನಿನ್ನೆ ಇದರ ಬಗ್ಗೆ ವಿಸ್ತೃತವಾಗಿ ಚರ್ಚೆಯಾಗಿದೆ. ಅವರು ಬೇಡ ಬೇಡವೆಂದರೂ ಸಹ ಇದರ ಬಗ್ಗೆ ಚರ್ಚೆ ಮಾಡಿದ್ದಾರೆ. ಚರ್ಚೆಗೆ ಉತ್ತರವನ್ನೂ ಕೂಡ ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ಈಗ ನೋಟೀಸ್ ಕೊಟ್ಟಿದ್ದೇವೆ. ಅದಕ್ಕೆ ನಿಯಮಾವಳಿ ಪ್ರಕಾರ ಪ್ರಸ್ತಾಪಿಸಲಿಕ್ಕೆ ಅವಕಾಶ ಮಾಡಿಕೊಡಿ .....

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ನೇರವಾಗಿ ಮಾನ್ಯ ಮುಖ್ಯಮಂತ್ರಿಗಳೇ 500–600 ಕೋಟಿ ರೂ.ಗಳ ಅವ್ಯವಹಾರ ಆಗಿದೆ ಎಂದು ಆಪಾದನೆ ಹೊರಿಸಿದ್ದಾರೆ. ಅದಕ್ಕಾಗಿ ನೇರವಾಗಿ ಆಪಾದನೆ ಮಾಡುವುದಕ್ಕೋಸ್ಕರವೇ ನಾನು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇನೆ.

ಅಧ್ಯಕ್ಷರು : ಆಯಿತು, ನೀವು ಇನ್ನೊಂದು ಪತ್ರವೇನು ಕೊಟ್ಟಿದ್ದೀರಿ, ಅದರ ಬಗ್ಗೆ ನಿಯಮವನ್ನು ಪರಿಶೀಲನೆ ಮಾಡಿ ನಾನು ಹೇಳುತ್ತೇನೆ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ಈಗಲೇ ಹೇಳಿ, ಅದು ತೆಗೆದುಕೊಳ್ಳುತ್ತೀರಾ ? ಇಲ್ಲವೇ ?

(ಗೊಂದಲ)

ಅಧ್ಯಕ್ಷರು : ಅದನ್ನು ಈಗಲೇ ಹೇಳಬೇಕೆಂದು ನೀವೇನೂ ಒತ್ತಾಯ ಮಾಡುವಂತಿಲ್ಲ. ಅದನ್ನು ನಾನು ಪರಿಶೀಲನೆ ಮಾಡುತ್ತೇನೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ದಯಮಾಡಿ ನಮಗೆ ಅವಕಾಶ ಮಾಡಿಕೊಡಬೇಕು. ನಿನ್ನೆ ನಡೆದಂತಹ .....

(ಗೊಂದಲ)

ಅಧ್ಯಕ್ಷರು : ಪರಿಶೀಲನೆ ಮಾಡಿ ಅವಕಾಶ ಮಾಡಿಕೊಡುತ್ತೇನೆ.

(ಗೊಂದಲ)

ಶ್ರೀ ಬಂಡೆಪ್ಪ ಕಾಶಂಪೂರ್ : ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ನಮ್ಮ ಮೇಲೆ ಕೆಲವೊಂದು charges ಮಾಡಿದರು. ಅದಕ್ಕೆ clarification ಕೊಡುವುದಕ್ಕೂ ಸಹ ನೀವು ನಮಗೆ ಅವಕಾಶ ಮಾಡಿಕೊಡಲಿಲ್ಲ.

ಅಧ್ಯಕ್ಷರು: ನೀವು ಎಲ್ಲಾ clarification ಮಾಡಿಸಿದ್ದರಲ್ಲಾ,

ಶ್ರೀ ಹೆಚ್.ಸಿ. ಬಾಲಕೃಷ್ಣ : ಅವರು ಮಾಡಿದರೆ ನಮ್ಮವರು ಮಾಡಿಲ್ಲವಲ್ಲಾ?

ಅಧ್ಯಕ್ಷರು : ಈಗ ಅದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶವಿಲ್ಲ, ಈಗ ತಾವೇನು ಪತ್ರವನ್ನು ಕೊಟ್ಟಿದ್ದೀರಿ, I will examine, ಇದರಲ್ಲಿ ಚರ್ಚೆಗೆ ಅವಕಾಶವಿಲ್ಲ, ಈ ಬಗ್ಗೆ ಒಂದು ಸಲ ಚರ್ಚೆಯಾಗಿದೆ, ನಾನು ಕಾಲಾವಕಾಶವನ್ನು ಕೊಡುತ್ತೇನೆ..

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್ [ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಈಗ ತಳ್ಳಿಹಾಕಿದ್ದೀರಾ, ಸ್ಪೀಕರ್ ಅವರನ್ನು ಫೋರ್ಸ್ ಮಾಡುವುದರಲ್ಲಿ ಅರ್ಥವಿಲ್ಲ, ದಯವಿಟ್ಟು ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳುವುದು..

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ : ನಿನ್ನೆ ಮುಖ್ಯಮಂತ್ರಿಗಳು ನಮ್ಮ ಮೇಲೆ ನೇರವಾಗಿ ಆರೋಪ ಮಾಡಿದ್ದಾರೆ, ಅದೆಲ್ಲಾ ಮಾಧ್ಯಮದಲ್ಲಿ ಬಂದಿದೆ,

ಅದಕ್ಕೆ ನಾವು ನಿಲುವಳಿ ಸೂಚನೆಯನ್ನು ಮಂಡಿಸಿದ್ದೇವೆ, ದಯಮಾಡಿ ತಾವು ಅದಕ್ಕೆ ಅವಕಾಶ ಮಾಡಿಕೊಡಿ, ಮಾಧ್ಯಮದಲ್ಲಿ ನಮ್ಮ ಮುಖಂಡರ ಮೇಲೆ ತಪ್ಪು ಅಭಿಪ್ರಾಯ ಬರುವಂತೆ ಬಂದಿದೆ, ಅದನ್ನು ಕ್ಲಾರಿಫೈ ಮಾಡಬೇಕು.

(ಗೊಂದಲ)

ಅಧ್ಯಕ್ಷರು : ನೀವು ರಾಜ್ಯಪಾಲರ ಭಾಷಣದ ಮೇಲೆ ಎಲ್ಲವನ್ನೂ ಮಾತನಾಡಿ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಚರ್ಚೆಯನ್ನು ಯಾವ ರೂಪದಲ್ಲಿ ತೆಗೆದುಕೊಳ್ಳುತ್ತೀರೆಂಬುದನ್ನು ಹೇಳಿ, ಏನಾದರೂ ನೀವು ಹೇಳಬೇಕಲ್ಲಾ? ಈಗ ಬೇಡ, ಮುಂದೆ ಚರ್ಚೆಗೆ ಅವಕಾಶ ಕೊಡುತ್ತೇವೆಂದು ಹೇಳಿ, ಯಾವಾಗ ಎಂದು ಹೇಳಬೇಕಲ್ಲ, ಯಾವಾಗ ನಿರ್ಣಯ ತೆಗೆದುಕೊಳ್ಳುತ್ತಾರೆ..

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ (ಪಂಚಾಯತ್ ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ಸಚಿವರು) : ಇವತ್ತೇ ನೀವು ರೂಲಿಂಗ್ ಕೊಡಬೇಕೆಂದು ಸ್ಪೀಕರ್ ಅವರಿಗೆ ಒತ್ತಾಯ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಹೆಚ್.ಸಿ. ಬಾಲಕೃಷ್ಣ : ನಾವು ಹೀಗೆ ಮಾಡಿ ಎಂದು ಹೇಳುತ್ತಿಲ್ಲ, ಹೇಗೆ ಮಾಡುತ್ತೇವೆಂಬುದನ್ನಾದರೂ ಹೇಳಬೇಕಲ್ಲ?

ಶ್ರೀ ಜಗದೀಶ್ ಶೆಟ್ಟರ್ : ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ, ಸ್ಪೀಕರ್ ಅವರಿಗೆ ಟೈಂ ಕೊಡಿ, ಅವರಿಗೆ ಟೈಂ ನಿಗದಿ ಮಾಡಬೇಡಿ, ಬೇಕೆಂದರೆ ಕೊಡುವುದು, ಬೇಡವೆಂದರೆ ಕೊಡದಿರುವುದು ಅವರಿಗೆ ಬಿಟ್ಟದ್ದು ಅವರಿಗೆ ಬಿಟ್ಟಂಥ ವಿಚಾರ..

(ಗೊಂದಲ)

ಅಧ್ಯಕ್ಷರು : ನೀವು statement ತರಹ ಏನು ನೀವು ಕೊಟ್ಟಿದ್ದೀರಿ, ಅದನ್ನು ನಾನು examine ಮಾಡಿ ಕೊಡುತ್ತೇನೆ, ನಮ್ಮ ನಿಯಮಾವಳಿಯಲ್ಲಿ ಬರುತ್ತದೆಯೇ ಎಂಬುದನ್ನು ಪರಿಶೀಲನೆ ಮಾಡಿ ನಾನು ಹೇಳುತ್ತೇನೆ, ಈಗ ನಿಲುವಳಿ ಸೂಚನೆಯನ್ನು ತಿರಸ್ಕಾರ ಮಾಡಿದ್ದೇನೆ, ಮತ್ತೆ ಅದನ್ನು ಎತ್ತಬೇಡಿ,

ತಾವೇನು ಪತ್ರವನ್ನು ಕೊಟ್ಟಿದ್ದೀರಿ, ಅದರ ಬಗ್ಗೆ ನಾನು ಪರಿಶೀಲನೆ ಮಾಡಿ ಈಗಲೇ ಹೇಳುತ್ತೇನೆ, ಕಾಲಾವಕಾಶ ಬೇಡವೇ? You cannot force me. ಈ ರೀತಿ ನನ್ನ ಮೇಲೆ ಒತ್ತಡವನ್ನು ತರುವುದಕ್ಕೆ ನಿಮಗೆ ಅವಕಾಶವಿಲ್ಲ...

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಸೈಕಲ್ ಹಗರಣವಿರಬಹುದು, ನನ್ನ ತೇಜೋವಧೆಯಾಗಿದೆ, ಅದಕ್ಕೆ ನನಗೆ ಕ್ಲಾರಿಫಿಕೇಷನ್ ಬೇಕಾಗಿದೆ..

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಪರಿಶೀಲನೆ ಮಾಡುತ್ತೇನೆಂದು ಹೇಳಿದ್ದಾರೆ, ಹೇಳಿದ ಮೇಲೂ ತಾವು ಪದೇ ಪದೇ ಸ್ಪೀಕರ್ ಮೇಲೆ ಒತ್ತಡ ತರಬಾರದು, ಇದು ಹೀಗೆ ಆಗಬೇಕು, ಈಗಲೇ ರೂಲಿಂಗ್ ಕೊಡಿ ಎಂದು ಹೇಳಲು ಬರುವುದಿಲ್ಲ..

(ಗೊಂದಲ)

ಅಧ್ಯಕ್ಷರು : ಜಯಚಂದ್ರರವರೆ, ತಾವು ಗಮನ ಸೆಳೆಯಿರಿ.

ಶ್ರೀ ಹೆಚ್.ಪಿ. ಬಾಲಕೃಷ್ಣ: ಅಧ್ಯಕ್ಷರೆ, ನಿನ್ನೆ ನಮಗೆ ಕ್ಲಾರಿಫಿಕೇಷನ್‌ಗೂ ಅವಕಾಶ ಕೊಡಲಿಲ್ಲ, ಜನತೆಗೆ ಸದನ ಮೂಲಕ ನಮ್ಮ ಬಗ್ಗೆ ತಪ್ಪು ಮಾಹಿತಿ ಹೋಗಬಾರದಲ್ಲಾ?

(ಗೊಂದಲ)

ಅಧ್ಯಕ್ಷರು : ರಾಜ್ಯಪಾಲರ ಭಾಷಣದ ಮೇಲೆ ಎಲ್ಲವನ್ನೂ ಮಾತನಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ [ಮುಖ್ಯಮಂತ್ರಿಗಳು] : ಸರ್, ತಮ್ಮ ಒಪ್ಪಿಗೆ ಇದ್ದರೆ ನಾನು ಒಂದು ಸಲಹೆಯನ್ನು ಕೊಡುತ್ತೇನೆ, ಅವರು ಏನು ಪ್ರಸ್ತಾಪ ಮಾಡಬೇಕೆಂದಿದ್ದಾರೆ, ಅದಕ್ಕೊಂದು ಸಮಯವನ್ನು ನಿಗದಿ ಮಾಡಿ, ಯಾವುದೇ ವಿಷಯವಿರಬಹುದು, ಅಂಕಿ ಅಂಶದೊಂದಿಗೆ, ರಾಜ್ಯದ ಜನರ ಹಿತದೃಷ್ಟಿಯಿಂದ ಏನೇನು ಮಾಹಿತಿಯನ್ನು ಈ ಮನೆಗೆ ಕೊಡಬೇಕಾಗಿದೆ, ಅದನ್ನು ಇಡಲಿ. ಅದು, ಅವರು ಈ ವಿದ್ಯುತ್ ಇಲಾಖೆಯನ್ನು ವಹಿಸಿಕೊಂಡಂಥ ಸಂದರ್ಭದಲ್ಲಿ, PWD ಇಲಾಖೆ ವಹಿಸಿಕೊಂಡಂಥ

ಸಂದರ್ಭದಲ್ಲಿರಬಹುದು ಅಥವಾ ನಾನು ಉಪ ಮುಖ್ಯಮಂತ್ರಿಯಾಗಿದ್ದಾಗ ನನ್ನ ಇಲಾಖೆಗಳನ್ನು ನೋಡಿಕೊಂಡಿರುವುದಿರಬಹುದು, ಮುಖ್ಯಮಂತ್ರಿಯಾಗಿ ಕಳೆದ 10–20 ತಿಂಗಳಿನಿಂದ ನಾನು ವಹಿಸಿಕೊಂಡಿರುವ ಇಲಾಖೆಗಳಿರಬಹುದು, ನನ್ನ ಸಚಿವ ಸಂಪುಟದ ಯಾವುದೇ ವಿಷಯಗಳಿರಬಹುದು, ಈ ಮನೆಯಲ್ಲಿ ಚರ್ಚೆ ಮಾಡಿ ಏನಾದರು ಕಾನೂನುಬಾಹಿರವಾದ ವ್ಯವಹಾರಗಳು ನಡೆದಿದ್ದರೆ ಬೆಳಕನ್ನು ಚೆಲ್ಲುವಂಥ ಸಂಪೂರ್ಣವಾದ ಅಧಿಕಾರ ನಿಮಗಿದೆ, ಇಲ್ಲವೆಂದು ನಾನು ಹೇಳುವುದಿಲ್ಲ. ನಿನ್ನೆ ವಿದ್ಯುತ್ ಇಲಾಖೆಗೆ ಸಂಬಂಧಿಸಿದಂತೆ ಸಮಗ್ರವಾದ ಚರ್ಚೆಯಾಯಿತು. ನಿನ್ನೆ ನಿಮಗೆ ಸಮಂಜಸವಾದ ಕ್ಲಾರಿಫಿಕೇಷನ್, ಉತ್ತರ ಸಿಕ್ಕಿದೆ ಎಂದು ನಾನು ಭಾವಿಸುತ್ತೇನೆ. ನಿಮಗೆ ತೃಪ್ತಿಯಾಗಿಲ್ಲವೆಂದರೆ, ಬೇರೆ ನಿಯಮದಡಿ ತನ್ನಿ. ಈ ಮನೆ ಕಾರ್ಯಕಲಾಪ ಆರಂಭವಾಗುವುದಕ್ಕಿಂತ ಮುಂಚೆ, ಯಾವುದೇ ವಿಷಯದಲ್ಲಿ ಕೂಲಂಕುಷವಾಗಿ ಚರ್ಚೆ ಮಾಡೋಣ, ಬೆಳಿಗ್ಗೆ 10–11 ಗಂಟೆಗೆ ಸೇರಿದರೆ ಸಂಜೆ 9–10 ಗಂಟೆಯವರೆಗೆ ಕುಳಿತುಕೊಳ್ಳಲು ನಾನು ಸಿದ್ಧವಿದ್ದೇವೆ, ಯಾವುದೇ ವಿಷಯವನ್ನು ಇಲ್ಲಿ ಮಾತನಾಡದೆ ಹೊರಗಡೆ ಹೋಗಿ ಇಲ್ಲಸಲ್ಲದ್ದನ್ನು ಹೇಳುವುದಕ್ಕಿಂತ ಈ ಮನೆಯಲ್ಲಿ ಮಾತನಾಡಿದರೆ ಎಲ್ಲವೂ ದಾಖಲೆಗೆ ಹೋಗುತ್ತದೆ, ಜನ ತೀರ್ಮಾನ ಮಾಡುತ್ತಾರೆ ಎಂದು ಒಂದು ಮಾತನ್ನು ಹೇಳಿದ್ದೇನೆ, ಅದನ್ನು ನಾನು ಒಪ್ಪುತ್ತೇನೆ. ಅದಕ್ಕಾಗಿ ತಮ್ಮ ಕೊಠಡಿಯಲ್ಲಿ ಕರೆಯಿಸಿ ಚರ್ಚೆಗೆ ಯಾವುದಾದರು ಸಮಯ ನಿಗದಿ ಮಾಡಬೇಕೆಂದು ನಿಮಗೆ ಅನಿಸಿದರೆ, ಅದು ಸರಿ ಎಂದು ಕಂಡರೆ, ಯಾವುದೇ ಚರ್ಚೆಗೆ ನಾವು ಸಿದ್ಧರಿದ್ದೇವೆ, ಇದರ ಬಗ್ಗೆ ಎರಡು ಮಾತಿಲ್ಲ. ಆದುದರಿಂದ, ಚೇರಿಗೆ ಗೌರವ ಕೊಟ್ಟು, ನಿಯಮಾವಳಿಯ ಚೌಕಟ್ಟಿನಲ್ಲಿ ಕೆಲಸ ಮಾಡುವುದನ್ನು ನಾವು ನೀವು ಸೇರಿ ಅಭ್ಯಾಸ ಮಾಡಿಕೊಳ್ಳೋಣ. ಸದನದ ಕಾರ್ಯಕಲಾಪವನ್ನು ಹೀಗೆ ಮಾಡಬೇಕೆಂದು ಯಾರು ಆ ಚೇರಿಗೆ dictate ಮಾಡುವುದಕ್ಕೆ ಬರುವುದಿಲ್ಲ. ಆ ನಿಯಮಾವಳಿಗಳ ಚೌಕಟ್ಟಿನಲ್ಲಿ ಯಾವುದೇ ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ನಿಮಗೆ ಸಂಪೂರ್ಣವಾದ ಅಧಿಕಾರವಿದೆ, ಎಲ್ಲಾ

ಮಾಹಿತಿಗಳೊಡನೆ ಇಲ್ಲಿ ನಾವು ಉತ್ತರ ಕೊಡುವುದಕ್ಕೆ ಅನುಕೂಲವಾಗುತ್ತದೆ, ನೋಟೀಸ್ ಕೊಡಿ, ಅಧ್ಯಕ್ಷರು ಸಮಯ ನಿಗದಿ ಮಾಡಲಿ, ಚರ್ಚೆ ಮಾಡೋಣ.

ಶ್ರೀ ಕೆ.ಎಂ. ಶಿವಲಿಂಗೇ ಗೌಡ : ಅಧ್ಯಕ್ಷರೆ, ನಮ್ಮ ಕಾನೂನು ಸಚಿವರು, ಯಾರೊಬ್ಬರ ಮೇಲೆ ಆಪಾದನೆ ಮಾಡಬೇಕಾದರೆ ಅಧ್ಯಕ್ಷರಿಗೆ ನೋಟೀಸ್ ಕೊಟ್ಟು ಮಾಡಬೇಕು ಎಂದು ಹೇಳಿದರು.

(ಗೊಂದಲ)

ಅಧ್ಯಕ್ಷರು : ಕುಳಿತುಕೊಳ್ಳುವುದು, ಇದು ದಾಖಲೆಗೆ ಹೋಗುವುದಿಲ್ಲ, ಮಾತನಾಡುವುದಕ್ಕಿಂತ ಮುಂಚೆ ಅನುಮತಿಯನ್ನು ತೆಗೆದುಕೊಳ್ಳಬೇಕಲ್ಲ, ನೀವು ಎದ್ದು ನಿಂತಿರಿ, ಅವರು ಎದ್ದರು...

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ಅಧ್ಯಕ್ಷರೆ, ಯಾವರೀತಿ ಚರ್ಚೆ ಮಾಡಬೇಕೆಂಬುದನ್ನು ಹೇಳಿ, ಈಗ ಮುಖ್ಯಮಂತ್ರಿಗಳು ಚರ್ಚೆಗೆ, ಉತ್ತರ ಕೊಡುವುದಕ್ಕೆ ನಾನು ರೆಡಿ ಇದ್ದೇನೆಂದು ಹೇಳಿದ್ದಾರೆ, ದಾಖಲೆಗೆ ಹೋಗುವುದಿಲ್ಲವೆಂದು ತಾವು ಹೇಳುವುದಾದರೆ ನಾವು ಸುಮ್ಮನೆ ಕುಳಿತುಕೊಳ್ಳೋಣವೇ? ದಾಖಲೆಗೆ ಹೋಗುವುದಿಲ್ಲವೆಂದರೆ ಅರ್ಥವೇನು?

ಅಧ್ಯಕ್ಷರು : ಎದ್ದು ನಿಂತು ಏನು ಬೇಕಾದರು ಮಾತನಾಡಬಹುದೇ?

ಶ್ರೀ ಹೆಚ್.ಸಿ. ಬಾಲಕೃಷ್ಣ : ಅವರಿಗೆ [ಸಿ.ಎಂ] ಅವಕಾಶ ಕೊಟ್ಟಿರಿ, ನಮಗೆ ಅವಕಾಶ ಕೊಡುವುದಿಲ್ಲವೆಂದರೆ ಅರ್ಥವೇನು?

ಅಧ್ಯಕ್ಷರು : ಈ ರೀತಿ ಪ್ರಶ್ನೆ ಮಾಡುತ್ತಿದ್ದರೆ ನನ್ನಲ್ಲಿ ಉತ್ತರವಿಲ್ಲ..

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ನಿನ್ನೆ ಚರ್ಚೆ ಮಾಡಲು ಹೋದರೆ ನೋಟೀಸ್ ಕೊಡಿ ಎನ್ನುತ್ತೀರಾ, ನೋಟೀಸ್ ಕೊಟ್ಟರೆ ಈಗ ಆಗುವುದಿಲ್ಲವೆನ್ನುತ್ತೀರಾ, ಅರ್ಥವೇನು?..

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡುವುದಕ್ಕೆ ಸಂಪೂರ್ಣವಾದ ಅವಕಾಶವಿದೆ, ಆ ಸಂದರ್ಭದಲ್ಲಿ ಯಾವುದೇ ವಿಷಯವನ್ನು ಮಾತನಾಡಲು ಅವಕಾಶವಿದೆ, ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡುವ ಯಾವುದೇ ವಿಷಯಕ್ಕೆ ಬೇಕಾದರೂ ನಾವು ಉತ್ತರ ಕೊಡುವುದಕ್ಕೆ ಸಿದ್ಧರಿದ್ದೇವೆ, ಇದು ಭಂಡತನ..

(ಗೊಂದಲ)

ಅಧ್ಯಕ್ಷರು : ತಾವೇನು ಪತ್ರವನ್ನು ಕೊಟ್ಟಿದ್ದೀರಿ, ಅದರ ಬಗ್ಗೆ ಮುಖ್ಯಮಂತ್ರಿಗಳು ಹೇಳಿಕೆಯನ್ನು ಕೊಟ್ಟಿದ್ದಾರೆ, ನಾನು ಈ ಎರಡನ್ನು ಪರಿಶೀಲನೆ ಮಾಡಿ ತೀರ್ಮಾನ ಮಾಡುತ್ತೇನೆ, ಮತ್ತೆ ಆ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಬೇಡ.

ಶ್ರೀ ಟಿ.ಬಿ. ಜಯಚಂದ್ರ : ಈಗ ಯಾವುದೇ ಒಂದು ಆರೋಪ ಮಾಡಬೇಕಾದರೆ, ಸ್ಪೀಕರ್ ಅವರು ರೂಲಿಂಗ್ ಕೊಟ್ಟ ಮೇಲೆ, ನಾನು ಇದಕ್ಕೆ ಕಾಲ ನಿಗದಿ ಮಾಡುತ್ತೇನೆಂದು ಅವರು ಒಪ್ಪಿಗೆ ಕೊಟ್ಟ ಮೇಲೆ...

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ಮುಖ್ಯಮಂತ್ರಿಗಳು ನಮ್ಮ ಮೇಲೆ ಆರೋಪ ಮಾಡದಿದ್ದರೆ ನಾವು ಕೇಳುತ್ತಿರಲಿಲ್ಲಾ, ಆರೋಪ ಮಾಡಿದ್ದಾರೆ. ಬೇರೆ ನಿಯಮದಡಿ ಚರ್ಚೆ ಮಾಡುವುದಕ್ಕೆ ತನ್ನಿ ಎಂದು ನಿನ್ನೆ ಲಾ ಮಿನಿಸ್ಟರ್ ಹೇಳಿದರು, ನಿಯಮದಡಿಯಲ್ಲಿ ಕೊಟ್ಟಿದ್ದೇವೆ, ಸ್ಪೀಕರ್ ಅವರು ಏನೆಂದು ನಮಗೆ ಹೇಳಲಿ, ಸರಿ ನಿಮಗೆ ಅರ್ಧಗಂಟೆ ಕಾಲ ಚರ್ಚೆ ಮಾಡುವುದಕ್ಕೆ ಕಾಲಾವಕಾಶ ಕೊಡುತ್ತೇನೆಂದು ಸ್ಪೀಕರ್ ಅವರು ಹೇಳಲಿ..

(ಗೊಂದಲ)

ಅಧ್ಯಕ್ಷರು : ನಾನು ಈ ಎರಡನ್ನೂ ಪರಿಶೀಲನೆ ಮಾಡಿ ಕೊಡುತ್ತೇನೆಂದು ಹೇಳಿದ್ದೇನಲ್ಲಾ, I will examine, ಪರಿಶೀಲನೆ ಮಾಡಿ ಕೊಡುತ್ತೇನೆ..

(ಗೊಂದಲ)

ಶ್ರೀ ಎಂ.ಪಿ. ರೇಣುಕಾಚಾರ್ಯ [ಅಬಕಾರಿ ಸಚಿವರು] : ನೀವು ಆರೋಪ ಮಾಡಬಹುದಾ, ನಿಮಗೆ ಗೌರವವಿದೆಯಾ, ದೇಶದ ಮಾಜಿ ಪ್ರಧಾನಮಂತ್ರಿಗಳಾಗಿ ಈ ರಾಜ್ಯಕ್ಕೆ ಮಾದರಿಯಾಗಿರಿ, ಈ ರಾಜ್ಯದ ಜನರಿಗೆ ಪೂರಕರಾಗಿ ಕೆಲಸ ಮಾಡಿ, ಮಾರಕರಾಗಬೇಡಿ, ರಾಜ್ಯದ ಜನರಿಗೆ ಗೊತ್ತಿದೆ, ನಿಮ್ಮನ್ನು ಜನರು ನೋಡುತ್ತಿದ್ದಾರೆ, ಸನ್ಮಾನ್ಯ ಮುಖ್ಯಮಂತ್ರಿಗಳು ನೀವು ಮಾಡಿದಂಥ ಆರೋಪಗಳಿಗೆ ಸರಿಯಾದ ಉತ್ತರವನ್ನು ಕೊಟ್ಟಿದ್ದಾರೆ, ಸದನವನ್ನು ಹೀಗೆ ನಡೆಸಬೇಕೆಂದು ಹೇಳುವುದಕ್ಕೆ ನಿಮಗೆ ಅಧಿಕಾರವಿಲ್ಲ, ಸಭಾನಾಯಕರು ಒಪ್ಪಿದ್ದಾರೆ, ಸ್ಪೀಕರ್ ಅವರು ಸಮಯ ನಿಗದಿ ಮಾಡುತ್ತೇನೆಂದು ಹೇಳಿದ್ದಾರೆ..

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಅಧ್ಯಕ್ಷರೆ, ನಾನು ಎರಡು ಅಂಶಗಳನ್ನು ಹೇಳುತ್ತೇನೆ, ತಾವು ಸಮಯ ನಿಗದಿ ಮಾಡಿ. ಸನ್ಮಾನ್ಯ ಮುಖ್ಯಮಂತ್ರಿಗಳ ಸದನಕ್ಕೆ ಒಂದು ಆಶ್ವಾಸನೆಯನ್ನು ಹಿಂದಿನಿಂದಲೂ ಕೊಡುತ್ತಿದ್ದಾರೆ. ನಾನು ಹಿಂದೆ ಇಂಧನ ಮಂತ್ರಿಯಾಗಿದ್ದಾಗ, ಲೋಕೋಪಯೋಗಿ ಮಂತ್ರಿಯಾಗಿದ್ದಾಗ, 18 ತಿಂಗಳು ಮುಖ್ಯಮಂತ್ರಿಗಳು ಉಪ ಮುಖ್ಯಮಂತ್ರಿಗಳಾಗಿದ್ದಾಗ, 20 ತಿಂಗಳು ಈಗ ಮುಖ್ಯಮಂತ್ರಿಗಳಾಗಿರುವಾಗ, ಈ ಅವಧಿಯಲ್ಲಿ ಏನೇನು ಮಾಡಿದ್ದೇವೆ, ಅಷ್ಟನ್ನು ಈ ಸದನದಲ್ಲಿ ಚರ್ಚೆ ಮಾಡುವುದಕ್ಕೆ ನಾನು ಸಿದ್ಧನಿದ್ದೇನೆಂದು ಮುಖ್ಯಮಂತ್ರಿಗಳು ಈಗ ಸದನಕ್ಕೆ ಆಶ್ವಾಸನೆ ಕೊಟ್ಟಿದ್ದಾರೆ. ಆದರೆ ಒಂದೇ ಒಂದು ಕ್ಲಾರಿಫಿಕೇಷನ್, ನಿನ್ನೆ ಕೆಲವು ವಿಷಯಗಳನ್ನು ದಾಖಲೆಗಳನ್ನು ನೇರವಾಗಿ ಮುಖ್ಯಮಂತ್ರಿಗಳ ಮೇಲೆ ಆಪಾದನೆ ಮಾಡುವುದಕ್ಕೆ ತಂದು ಇಟ್ಟುಕೊಂಡಿದ್ದೆ. ಲಾ ಮಿನಿಸ್ಟರ್ ಏನು ಹೇಳದರೆಂದರೆ, ಇಂಧನ ಇಲಾಖೆಗೆ ಮಾತ್ರ ಸಂಬಂಧಿಸಿರುವುದನ್ನು, ಸಿದ್ದರಾಮಯ್ಯನವರು ರೂಲ್ 60 ರಲ್ಲಿ ಕೊಟ್ಟಿರುವುದನ್ನು ರೂಲ್ 69 ಆಗಿ ಕನ್ವರ್ಟ್ ಮಾಡಲಾಗಿದೆ ಎಂದು ಹೇಳಿದರು. ತಾವು ನನಗೆ ಬೇರೆ ನಿಯಮದಡಿ ಕೊಡಿ ಎಂದು ನಿನ್ನೆ ನನಗೆ ಹೇಳಿದಿರಿ, ಅದೇ ರೀತಿ ಇವತ್ತು ನಿಯಮಾವಳಿ ಪ್ರಕಾರ ಕೊಟ್ಟಿದ್ದೇನೆ, ಪ್ಲಸ್, ನಿನ್ನೆ ಮುಖ್ಯಮಂತ್ರಿಗಳು

ಕರೆಂಟ್ ಅಭಾವದ ಬಗ್ಗೆ ಹೇಳುವುದು ಬಿಟ್ಟು, ರೇವಣ್ಣನವರು, ಕೊನೆಯ ದಿವಸ 6ನೇ ತಾರೀಖು ಸಚಿವ ಸಂಪುಟದಲ್ಲಿ..

(ಗೊಂದಲ)

ಶ್ರೀ ಎಂ.ಪಿ. ಅಪ್ಪಚ್ಚುರಂಜನ್ : ನೇರವಾದ ಆಪಾದನೆ ಮಾಡಿದವರು ಹಿರಿಯ ಸದಸ್ಯರಾದ ಮಾನ್ಯ ರೇವಣ್ಣನವರು. ಮಾನ್ಯ ರೇವಣ್ಣನವರು ಹಿರಿಯ ಸಚಿವರಾಗಿದ್ದಂಥವರು, ಅವರು ಏನು ಮಾತನಾಡಿದ್ದಾರೆ ಎಂಬುದನ್ನು ಅವರೇ ಸ್ವಲ್ಪ ಓದಿ ನೋಡಿದರೆ ಯಾರು ನೇರವಾದ ಆಪಾದನೆ ಮಾಡಿದ್ದಾರೆ ಎಂಬುದು ಗೊತ್ತಾಗುತ್ತದೆ. ಏನು ರೆಕಾರ್ಡ್ ಆಗಿದೆ ಎಂಬುದನ್ನು ಅವರು ಸ್ವಲ್ಪ ಓದಿನೋಡಲಿ.

(ಗೊಂದಲ)

ಅಧ್ಯಕ್ಷರು : ನಾನು ಆಗಾಗ ಸ್ಪಷ್ಟೀಕರಣ ಕೊಡಲು ಆಗುವುದಿಲ್ಲ. ತಾವು ಹೇಳುವುದನ್ನು ಹೇಳಿದ್ದೀರಿ. I will examine. ಅದನ್ನು ಪರಿಶೀಲನೆ ಮಾಡಿ ನಿಮಗೆ ಹೇಳುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಸಭಾಧ್ಯಕ್ಷರು ನನ್ನ ಮೇಲೆ ನೇರವಾದ ಆಪಾದನೆಯನ್ನು ಮಾಡಿದ್ದಾರೆ. ಆದ್ದರಿಂದ ನಾನು ರಾಜ್ಯದ ಜನತೆಗೆ ಕ್ಲಾರಿಫಿಕೇಷನ್ ಕೊಡದಿದ್ದರೆ ನಾನು ಇಂಧನ ಸಚಿವನಾಗಿದ್ದಾಗ ಏನೋ ಮಾಡಿದ್ದೇನೆ ಎಂಬ ಭಾವನೆ ಬರುತ್ತದೆ. ದಯಮಾಡಿ, 6ನೇ ತಾರೀಖು ಸಚಿವ ಸಂಪುಟದ ಸಭೆಯಲ್ಲಿ 13 ಜನ ನಾವು ಸೇರಿ ಏನಾದರು ಇಂಧನ ಇಲಾಖೆಯದ್ದನ್ನು ರಾಮಸ್ವಾಮಿಯವರಿಗೆ ಕೊಟ್ಟಿದ್ದೇನೆ ಎಂಬ ಬಗ್ಗೆ ಉದಯವಾಣಿ, ಹಿಂದೂ ಪತ್ರಿಕೆ, ಪ್ರಜಾವಾಣಿ ಪತ್ರಿಕೆಯಲ್ಲಿ ಇವತ್ತು ಏನು ಬಂದಿದೆ, ಆವತ್ತು ನಾನು ಏನಾದರು ಸಚಿವ ಸಂಪುಟದಲ್ಲಿ ತಂದು ಮಾಡಿದ್ದೇನೆಂದರೆ ಅವರು ಏನು ಹೇಳುತ್ತಾರೆ ಅದಕ್ಕೆ ನಾನು ಭಾಗಿಯಾಗುತ್ತೇನೆ, ನಾನು ರಾಜೀನಾಮೆ ಕೊಡುತ್ತೇನೆ. ಇಲ್ಲದಿದ್ದರೆ ಮುಖ್ಯಮಂತ್ರಿಗಳು ರಾಜೀನಾಮೆ ಕೊಡುತ್ತಾರಾ ಕೇಳಿ?

(ಗೊಂದಲ)

ಇವತ್ತೇ ನಾನು ಸದನದ ಮೂಲಕ ಹೇಳುತ್ತೇನೆ. ಮುಖ್ಯಮಂತ್ರಿಗಳು 6ನೇ ತಾರೀಖಿನ ಕ್ಯಾಬಿನೆಟ್‌ನಲ್ಲಿ ನಾನು ಮಾಡಿದ್ದೇನೆಂದು ಹೇಳಿಬಿಟ್ಟರು. ಯಾವ ರೀತಿಯಾಗಿ 2003ರಿಂದ ಟೆಂಡರ್ ನಡೆದುಕೊಂಡು ಬಂದಿದೆ, ಅವರ ಇಲಾಖೆಯವರೇ ಕಾರ್ಯದರ್ಶಿಯಾಗಿದ್ದಾರೆ,

(ಗೊಂದಲ)

ಅಧ್ಯಕ್ಷರು : ನಾನು ಈ ವಿಚಾರವನ್ನು ಇಲ್ಲಿಗೇ ಮುಕ್ತಾಯ ಮಾಡಿದ್ದೇನೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ನನ್ನ ಮೇಲೆ ಆರೋಪ ಇದೆ. ದಯಮಾಡಿ ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು : ಈ ರೀತಿ ಆಗಾಗ ಎದ್ದು ಹೇಳಿಕೆ ಕೊಟ್ಟುಕೊಂಡು ಹೋದರೆ ಸದನವನ್ನು ನಡೆಸುವುದಕ್ಕೆ ಕಷ್ಟವಾಗುತ್ತದೆ. ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಹೆಚ್.ಪಿ. ಬಾಲಕೃಷ್ಣ : ನಮ್ಮ ಮೇಲೆ ಆಪಾದನೆ ಇದೆ.

ಅಧ್ಯಕ್ಷರು : ಇಬ್ಬರೂ ಮಾತನಾಡಿದರೆ ಹೇಗೆ? ಇಲ್ಲಾ ನೀವು ಮಾತನಾಡಿ ಅಥವಾ ಅವರು ಮಾತನಾಡಲಿ.

(ಗೊಂದಲ)

ಶ್ರೀ ಹೆಚ್.ಪಿ. ಬಾಲಕೃಷ್ಣ : ತಾವು ಸಮಯ ನಿಗದಿ ಮಾಡಿ.

ಅಧ್ಯಕ್ಷರು : ನಿಮ್ಮ ನಿಲುವಳಿ ಸೂಚನೆಗೆ ತಾವು ಏನು ಪತ್ರ ಕೊಟ್ಟಿದ್ದೀರಿ ಅದು ಕ್ರಮಬದ್ಧವಾಗಿಲ್ಲವೆಂದು ತಿರಸ್ಕಾರವಾಗಿದೆ. ತಾವು ಒಂದು ಸ್ಟೇಟ್‌ಮೆಂಟ್ ರೀತಿ ಕೊಟ್ಟಿದ್ದಿರಿ. ಅದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಹೇಳಿಕೆಯನ್ನು ಕೊಟ್ಟಿದ್ದಾರೆ. ನಾನು ಎರಡನ್ನೂ ಪರಿಶೀಲನೆ ಮಾಡುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ : ನಾನು ಕೊಟ್ಟಿರುವುದು ಸ್ಟೇಟ್‌ಮೆಂಟ್ ರೀತಿಯಲ್ಲಾ, ನಾನು writingನಲ್ಲಿ ನಿನ್ನೆಯೂ ಕೊಟ್ಟಿದ್ದೇನೆ, ಇವತ್ತೂ ಕೊಟ್ಟಿದ್ದೇನೆ.

ಅಧ್ಯಕ್ಷರು: ಯಾವ ನಿಯಮದಲ್ಲಿ ಎಂದು ಹಾಕಿಲ್ಲ. ನಾನು ಹೇಳುವುದಕ್ಕೂ ತಾವು ಬಿಡದಿದ್ದರೆ ನಾನು ಏನನ್ನೂ ಹೇಳುವುದಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ..

ಅಧ್ಯಕ್ಷರು : ನಾನು ಹೇಳುವುದಕ್ಕೆ ಅವಕಾಶ ಕೊಡಿ. ನಾನು ಹೇಳುವುದಕ್ಕೂ ಅವಕಾಶ ಕೊಡದೆಯೇ ಎಲ್ಲವನ್ನು ನೀವು ಹೇಳಿದಂತೆಯೇ ನಾನು ಕೇಳಬೇಕೆಂದರೆ ಹೇಗೆ? ಮಾನ್ಯ ಮುಖ್ಯಮಂತ್ರಿಯವರು ಅದಕ್ಕೆ ಹೇಳಿದ್ದಾರೆ. ಆದ್ದರಿಂದ ನಾನು ತಮ್ಮದನ್ನು ಮತ್ತು ಮಾನ್ಯ ಮುಖ್ಯಮಂತ್ರಿಯವರ ಹೇಳಿಕೆಯನ್ನು ಪರಿಶೀಲನೆ ಮಾಡಿ ಒಂದು ನಿರ್ಣಯವನ್ನು ಕೈಗೊಳ್ಳುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ಇವತ್ತು ಹೇಳದಿದ್ದರೆ ರಾಜ್ಯದ ಜನತೆಗೆ ಮಾಹಿತಿ ಹೋಗುತ್ತದೆ.

(ಗೊಂದಲ)

ಅಧ್ಯಕ್ಷರು : ಎರಡನ್ನೂ ಪರಿಶೀಲನೆ ಮಾಡಿ ಕೊಡುತ್ತೇನೆ. ಇವತ್ತೇ ಕೊಡುತ್ತೇನೆ. ನೀವು ಹೇಳಿದಂತೆ ಈಗಲೇ ಕೊಡಬೇಕು, ಆಗಲೇ ಕೊಡಬೇಕು ಎಂದು ಹೇಳಿದರೆ ಆಗುವುದಿಲ್ಲ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಅವರು ಮಾಡಿರುವ ಆಪಾದನೆ ಮಾಧ್ಯಮದಲ್ಲಿ ಬಂದಿದೆ. ಆದ್ದರಿಂದ ದಯಮಾಡಿ ನೀವು ಯಾವ ರೀತಿಯಾಗಿ ಚರ್ಚೆಗೆ ಅವಕಾಶ ಕೊಡುತ್ತೀರಿ ಎಂಬ ಬಗ್ಗೆ ಹೇಳಿದರೆ ನಾವು ಸುಮ್ಮನಾಗುತ್ತೇವೆ. ನೀವು ಅದನ್ನು ಹೇಳಲಿಲ್ಲವಲ್ಲಾ? ದಯಮಾಡಿ ಯಾವ ರೀತಿ ಚರ್ಚೆಗೆ ಅವಕಾಶ ಕೊಡುತ್ತೀರಾ ಎಂಬುದನ್ನು ಹೇಳಿ.

ಅಧ್ಯಕ್ಷರು : ಇವತ್ತು ಮಧ್ಯಾಹ್ನದ ನಂತರ ಏನು ನಿರ್ಣಯವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡು ಹೇಳುತ್ತೇನೆ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಧ್ಯಾಹ್ನದ ನಂತರವೇ ಕೊಡಿ, ಆದರೆ, ಯಾವ ರೀತಿ ಚರ್ಚೆಗೆ ಅವಕಾಶ ಕೊಡುತ್ತೀರಾ?

(ಗೊಂದಲ)

ಅಧ್ಯಕ್ಷರು : ಇದೇನಿದು? ಯಾವ ರೀತಿ ಕೊಡುತ್ತೀರಾ ಎಂದರೆ ಏನು? ಹಾಗಾದರೆ ನೀವು ಹೇಳಿದ ರೀತಿ ಕೊಡಬೇಕೇ? No. No. This is too much. ಇದು ಬಹಳ ಅತಿಯಾಯಿತು. ಯಾವ ರೀತಿ ಕೊಡಬೇಕು ಎಂಬ ಮಾತು ಬಂದರೆ ನೀವು ಹೇಳಿದಂತೆ ಕೊಡಬೇಕೇ?

ಶ್ರೀ ಹೆಚ್.ಸಿ. ಬಾಲಕೃಷ್ಣ : ಇವತ್ತೇ ಕೊಡುತ್ತೀರಾ?

ಅಧ್ಯಕ್ಷರು : ಅಲ್ಲಾ ರೀ, ನೀವು ಹೇಳಿದಂತೆಯೇ ಕೊಡಬೇಕೇ? What is there? ಈ ರೀತಿ ಬೆದರಿಕೆಯನ್ನು ಹಾಕಿದರೆ ಅದನ್ನು ಬೇರೆ ರೀತಿ ತೆಗೆದುಕೊಳ್ಳಬೇಕಾಗುತ್ತದೆ. It is nothing but a threat. ನೀವೇನು chair ಗೆ ಬೆದರಿಕೆ ಹಾಕುತ್ತಿದ್ದೀರಾ?

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : I am on point of order. ಅವರು ಸದನದ ಮುಂದೆ ಒಂದು ನಿಲುವಳಿ ಸೂಚನೆಯನ್ನು ಮಂಡಿಸಿದ್ದರು. ಅದು ಕ್ರಮಬದ್ಧವಾಗಿಲ್ಲವೆಂದು ತಾವು ಅದನ್ನು ತಳ್ಳಿಹಾಕಿದ್ದೀರಿ. ಇನ್ನೊಂದು ಅವರು ಒಂದು ಸ್ಟೇಟ್‌ಮೆಂಟ್‌ನ್ನು ಮಾಡಿ ನನಗೆ ಅವಕಾಶ ಕೊಡಬೇಕೆಂದು ಹೇಳಿದ್ದಾರೆ. ರೇವಣ್ಣನವರು ಮಾತನಾಡುವುದಕ್ಕಿಂತಾ ಮೊದಲು ನಮ್ಮ ನಿಯಮಾವಳಿಗಳಲ್ಲಿ ಯಾವ ನಿಯಮದ ಅಡಿಯಲ್ಲಿ ಈ ಸ್ಟೇಟ್‌ಮೆಂಟ್‌ನ್ನು ಮಾಡಲು ಕೇಳುತ್ತಿದ್ದಾರೆ ಎಂದು ಹೇಳಬೇಕು. ಎರಡನೆಯದು, ನಮ್ಮ ಸಭೆಯಲ್ಲಿ ನಾಳೆ ಸಂಜೆಯ ಒಳಗೆ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯ approve ಆಗಬೇಕು. ಅದೂ ಕೂಡ ಬಹಳ ದೊಡ್ಡ ಕಾರ್ಯಕ್ರಮ. ಅನೇಕ ಹೊಸ ಸದಸ್ಯರುಗಳು ಇದರಲ್ಲಿ ಭಾಗವಹಿಸಿ ಮಾತನಾಡಬೇಕೆಂದು ಇದ್ದಾರೆ. ಸಭೆಯ ಬಹುಪಾಲು ಸಮಯವನ್ನು ಈ ಒಂದು ಸಂಗತಿಗಳೇ ಆಕ್ರಮಿಸುತ್ತಾ ಹೋದರೆ ನಿಜವಾದ ಕಲಾಪಕ್ಕೆ

ಯಾವಾಗ ಅವಕಾಶ? ಆದ್ದರಿಂದ, ಅವರು ಅವಕಾಶ ಕೊಡುವುದಕ್ಕಿಂತಾ ಮೊದಲು ಯಾವ ನಿಯಮಾವಳಿಯ ಅಡಿಯಲ್ಲಿ ಇವರು ಸ್ಟೇಟ್‌ಮೆಂಟ್ ಮಾಡಬೇಕು ಎಂಬುದನ್ನು ಸ್ಪಷ್ಟಪಡಿಸಬೇಕು. ತಾವು ಈಗ ಏನು ಗಮನ ಸೆಳೆಯುವ ಸೂಚನೆಗಳಿದೆ ಅದು ಆದ ತಕ್ಷಣ ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯದ ಬಗ್ಗೆ ಚರ್ಚೆಗೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ತಾವು ಏನು Point of Orderನ್ನು rise ಮಾಡಿದ್ದೀರಿ ಅದನ್ನು ಮತ್ತು ಮುಖ್ಯಮಂತ್ರಿಯವರ ಹೇಳಿಕೆ, ಅವರ ಪತ್ರ ಎಲ್ಲವನ್ನೂ ಪರಿಗಣನೆ ಮಾಡಿ I will take a decision.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ.

ಅಧ್ಯಕ್ಷರು : No.

ಶ್ರೀ ಹೆಚ್.ಡಿ. ರೇವಣ್ಣ : ಕಾನೂನು ಮಂತ್ರಿಗಳಿಗೆ ಅವಕಾಶ ಕೊಡುತ್ತೀರಿ, ನಾನು ಏನು ಮಾಡಿದ್ದೇನೆ? ಮುಖ್ಯಮಂತ್ರಿಗಳು ಹೇಳಿದ್ದನ್ನು ಕೇಳಿಕೊಂಡು ನಾವು ಕುಳಿತುಕೊಳ್ಳಲು ಆಗುತ್ತದೆಯೇ?

(ಗೊಂದಲ)

ಅಧ್ಯಕ್ಷರು : ಒಂದು ಸಲ ತೀರ್ಮಾನ ಕೊಟ್ಟಮೇಲೂ ಮತ್ತೆ ಮತ್ತೆ ಪ್ರಸ್ತಾಪ ಮಾಡಿದರೆ ಹೇಗೆ?

(ಗೊಂದಲ)

ಅಧ್ಯಕ್ಷರು : ತಾವು ಈ ರೀತಿ ಹೀಗೇ ಮಾಡಬೇಕು, ಈ ರೀತಿಯೇ ತೀರ್ಮಾನ ಮಾಡಬೇಕೆಂದು ಹೇಳಿದರೆ ನಾನು ಬೇರೆ ರೀತಿಯಲ್ಲಿ ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಹೆಚ್.ಡಿ.ರೇವಣ್ಣ : ತಾವು ಕಾನೂನು ಸಚಿವರಿಗೆ ಅವಕಾಶ ಕೊಟ್ಟಿದ್ದೀರಿ. ಅವರು ಹೇಳಿದ ಮೇಲೆ ನಾವು ಹೇಳಬೇಕಲ್ಲವೇ? ಅವರದ್ದಕ್ಕೆ ಕ್ಲಾರಿಫಿಕೇಷನ್ ಕೊಡಬೇಕಲ್ಲವೇ?

ಅಧ್ಯಕ್ಷರು : ನಿಮ್ಮ ಪತ್ರವೇನಿದೆ ಅದು, ಮಾನ್ಯ ಮುಖ್ಯಮಂತ್ರಿಯವರ ಹೇಳಿಕೆ ಮತ್ತು ಕಾನೂನು ಸಚಿವರು ಮಾಡಿರುವ Point of Order ಎಲ್ಲವನ್ನೂ ಸೇರಿಸಿ ತೀರ್ಮಾನ ತೆಗೆದುಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ಕಾನೂನು ಸಚಿವರು ಹೇಳಿದ್ದನ್ನು ನಾನು ಕೇಳಿಕೊಂಡು ಕೂರಬೇಕೆ?

(ಗೊಂದಲ)

ಶ್ರೀ ಎಂ.ಪಿ. ಅಪ್ಪಚ್ಚುರಂಜನ್ : ಅಧ್ಯಕ್ಷರ ರೂಲಿಂಗ್‌ನ್ನು ಪ್ರಶ್ನೆ ಮಾಡತಕ್ಕ ಅಧಿಕಾರ ಯಾರಿಗೂ ಇಲ್ಲ. ಆದರೂ, ನೀವು ಪ್ರಶ್ನೆ ಮಾಡುತ್ತಿದ್ದೀರಿ, ನಿರ್ದೇಶನ ನೀಡುತ್ತಿದ್ದೀರಿ. ಇದು ಸರಿಯಲ್ಲ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಕಾನೂನು ಸಚಿವರು ಎರಡು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ನಿಮ್ಮ ರೂಲಿಂಗ್‌ನ್ನು ಪ್ರಶ್ನೆ ಮಾಡುತ್ತಿಲ್ಲ.

(ಗೊಂದಲ)

ಅಧ್ಯಕ್ಷರು : ಈ ವಿಚಾರವನ್ನು ಇಲ್ಲಿಗೆ ಮುಕ್ತಾಯ ಮಾಡಿದ್ದೇನೆಂದು ಹೇಳಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು : ನಾನು ಮಾನ್ಯ ಮುಖ್ಯಮಂತ್ರಿಯವರ ಹೇಳಿಕೆ, ತಮ್ಮ ಪತ್ರ ಮತ್ತು ಅವರು ಪ್ರಸ್ತಾಪ ಮಾಡಿದ Point of Order ಎಲ್ಲವನ್ನೂ ಪರಿಗಣಿಸಿ ತೀರ್ಮಾನ ಕೊಡುತ್ತೇನೆಂದು ಹೇಳಿದ್ದೇನೆ. ಅದಕ್ಕೆ ಬದ್ಧರಾಗದಿದ್ದರೆ I will take a decision.

ಶ್ರೀ ಹೆಚ್.ಸಿ. ಬಾಲಕೃಷ್ಣ : ಯಾವಾಗ ಕೊಡುತ್ತೀರಿ ?

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ನಮ್ಮ ..

ಅಧ್ಯಕ್ಷರು : ನಾನು ಮಾತನಾಡುವಾಗ ನೀವು ಮಧ್ಯದಲ್ಲಿ ಏಕೆ ಮಾತನಾಡುತ್ತೀರಿ? ನೀವು ಹಿರಿಯ ಸದಸ್ಯರಾಗಿದ್ದು ನೀವು ಹೇಳಿದಂತೆ ನಾನು ಮಾಡಬೇಕು ಎಂಬ ರೀತಿಯ ಒತ್ತಡ ಸರಿಯಲ್ಲ.

ಶ್ರೀ ಹೆಚ್.ಡಿ. ರೇವಣ್ಣ : ನಾನು ಒತ್ತಡ ಮಾಡುತ್ತಿಲ್ಲ. ಕಾನೂನು ಸಚಿವರು ಇದೇ ರೀತಿ ಮಾಡಿಯೆಂದು ಹೇಳುತ್ತಿದ್ದಾರೆ. ಯಾವ ನಿಯಮದ ಅಡಿಯಲ್ಲಿ ನೋಟೀಸ್ ಕೊಟ್ಟಿದ್ದೀರಿ ಎಂದು ಕೇಳಿದ್ದಾರೆ. ನಿನ್ನೆ ನೀವು ಹೇಳಿರುವುದನ್ನು ಕಡತದಿಂದ ತೆಗೆಸಿ.

ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ನಾನು Point of Orderನ್ನು ಹೇಳಿರುವುದು ಸಭಾಧ್ಯಕ್ಷರಿಗೆ. ನೀವು ಅವರಿಗೆ ಹೇಳಿ.

ಶ್ರೀ ಹೆಚ್.ಡಿ. ರೇವಣ್ಣ : ನನ್ನ ಮೇಲೆ ನೋಟೀಸ್ ಕೊಡದೆಯೇ ನೀವು ಹೇಗೆ ಆಪಾದನೆ ಮಾಡಿದ್ದೀರಿ?

ಶ್ರೀ ಎಸ್. ಸುರೇಶ್‌ಕುಮಾರ್ : ತಾವು ಹಿರಿಯ ಸದಸ್ಯರು, ಸಚಿವರಾಗಿ ಕೆಲಸ ಮಾಡಿದವರು, ಇಡೀ ಸದನವನ್ನು, 224 ಜನ ಸದಸ್ಯರನ್ನು ಈ ರೀತಿ ಬ್ಲಾಕ್‌ಮೇಲ್ ಮಾಡಬಾರದು.

ಶ್ರೀ ಹೆಚ್.ಡಿ. ರೇವಣ್ಣ : ಇವರು ಸದನವನ್ನು ತಪ್ಪುದಾರಿಗೆ ಎಳೆದಿದ್ದಾರೆಂದು ಹೇಳಬೇಕಾಗುತ್ತದೆ. ಈ ರಾಜ್ಯದ ಜನತೆಯನ್ನು, ಸದನವನ್ನು ನಿನ್ನೆ ಮುಖ್ಯಮಂತ್ರಿಯವರು ತಪ್ಪುದಾರಿಗೆ ಎಳೆದಿದ್ದಾರೆ. ನನಗೆ ನೋಟೀಸ್ ಕೊಟ್ಟು ಮಾತನಾಡಿದ್ದರೆ ನಾನು ಕೇಳುತ್ತಿರಲಿಲ್ಲ.

ಅಧ್ಯಕ್ಷರು : ಈಗಲೇ ತೀರ್ಪನ್ನು ಕೊಡುತ್ತೇನೆ. ಮಾನ್ಯ ರೇವಣ್ಣನವರು ಈ ದಿವಸ ಕೊಟ್ಟಂತಹ ಪತ್ರದಲ್ಲಿ ಯಾವ ನಿಯಮದಲ್ಲಿ ಪ್ರಸ್ತಾಪ ಮಾಡಿದ್ದಾರೆ ಎಂಬುದಕ್ಕೆ ಯಾವುದೇ ಪ್ರಸ್ತಾಪನೆ ಇಲ್ಲ. ಈಗಾಗಲೇ ಕಾನೂನು ಸಚಿವರು ಅದರ ಬಗ್ಗೆ ಕ್ರಿಯಾಲೋಪವನ್ನು ಎತ್ತಿದ್ದಾರೆ. ಆ ಕ್ರಿಯಾಲೋಪವನ್ನು ಎತ್ತಿಹಿಡಿದು, ತಾವು ಕೊಟ್ಟಂಥ ಪತ್ರದ ಬಗ್ಗೆ ಚರ್ಚೆ ಮಾಡಲು ಅವಕಾಶ ಇಲ್ಲ ಎಂದು ತೀರ್ಮಾನ ಕೊಟ್ಟಿದ್ದೇನೆ.

(ಗೊಂದಲ)

ಶ್ರೀ ಹೆಚ್.ಸಿ.ಬಾಲಕೃಷ್ಣ: ಹಾಗಾದರೆ ನಾವು ಧರಣಿ ಮಾಡುತ್ತೇವೆ.

(ಈ ಹಂತದಲ್ಲಿ ಜೆ.ಡಿ.ಎಸ್.ಪಕ್ಷದ ಸದಸ್ಯರುಗಳು ಬಾವಿಯಲ್ಲಿ ಧರಣಿ ಹೂಡಿದರು)

11.40 ಪಿ.ಎಂ.

ಅಧ್ಯಕ್ಷರು : ಸದನದ ಬಾವಿಯಲ್ಲಿ ಮಾತನಾಡುವುದು ಯಾವುದೂ ಕೂಡ ದಾಖಲೆಗೆ ಹೋಗಬಾರದು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಸಭಾಧ್ಯಕ್ಷರು ಈಗಾಗಲೇ ರೂಲಿಂಗ್ ಕೊಟ್ಟಿದ್ದಾರೆ. ಸಭಾಧ್ಯಕ್ಷರು ರೂಲಿಂಗ್ ಕೊಟ್ಟಮೇಲೆ that is final. ಆದರೂ ಕೂಡ ಪದೇ ಪದೇ ಸಭಾಧ್ಯಕ್ಷರು ಇದೇ ರೀತಿ ರೂಲಿಂಗ್ ಕೊಡಬೇಕು, ಇದೇ ರೀತಿ ಚರ್ಚೆಗೆ ಅವಕಾಶವನ್ನು ಮಾಡಿಕೊಡಬೇಕು ಎಂಬುದು ಸರಿಯಲ್ಲ. ನಿಯಮವನ್ನು ಮೀರಿ ನೀವು ಈ ರೀತಿ ಮಾಡುತ್ತಿದ್ದೀರಿ. ಸದನದ ನಿಯಮಗಳಿಗೆ ಸರಿಯಾಗಿ ನಡೆದುಕೊಳ್ಳಬೇಕು. ಬೇರೆ ಸದಸ್ಯರುಗಳು ಕೂಡ ಮಾತನಾಡುವುದಕ್ಕೆ ಅವಕಾಶವಿದೆ. ಬೇರೆ ಬೇರೆ ವಿಷಯಗಳು ಚರ್ಚೆ ಮಾಡುವಂಥದ್ದು ಇದೆ. ಆದರೆ ನೀವು ಹೀಗೆ ಪದೇ ಪದೇ ಬಂದು ಸದನವನ್ನು stall ಮಾಡುತ್ತಿರುವುದರಿಂದ ಬೇರೆ ಶಾಸಕರು ಮಾತನಾಡಬೇಕಾದಂಥ ಅವರ ಹಕ್ಕನ್ನು ಮತ್ತು ಅವಕಾಶವನ್ನು ಕಿತ್ತುಕೊಳ್ಳುತ್ತಿದ್ದೀರಿ. ಇದು ಸರಿಯಲ್ಲ. ಸಭಾಧ್ಯಕ್ಷರ ರೂಲಿಂಗ್‌ನ್ನು ಯಾರು ಚಾಲೆಂಜ್ ಮಾಡಬಾರದು. ಗೌರವ ಕೊಡಬೇಕು. ನೀವು ಈ ರೀತಿ ಮಾಡುವುದು ಸರಿಯಲ್ಲ.

(ಗೊಂದಲ)

ಶ್ರೀ ಸುರೇಶ್‌ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಈಗ ಅವರ ವಿಚಾರ ಮತ್ತು ಮುಖ್ಯಮಂತ್ರಿಗಳ ವಿಚಾರ ಮತ್ತು ನನ್ನ ಪಾಯಿಂಟ್ ಆಫ್ ಆರ್ಡರ್ ಮೇಲೆ ಒಂದು ನಿರ್ಣಯವನ್ನು ತೆಗೆದುಕೊಂಡಿದ್ದೀರಿ. ಸನ್ಮಾನ್ಯ ರೇವಣ್ಣನವರು ಒಂದು ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಿದರು. ಅದಾದ ನಂತರ ಮುಖ್ಯಮಂತ್ರಿಗಳು ಕೂಡ ತಮ್ಮ ಒಂದು ನಿಲುವನ್ನು ಇಲ್ಲಿ ಪ್ರಕಟ ಮಾಡಿದ್ದಾರೆ. ತಾವೇನು ಹೇಳುತ್ತಿದ್ದೀರೆಂದರೆ, ಅವೆರಡನ್ನೂ ಕೂಡ ಪರಿಶೀಲಿಸಿ ನಾನು ನನ್ನ ನಿರ್ಧಾರವನ್ನು ಪ್ರಕಟಿಸುತ್ತೇನೆಂದು ಹೇಳುತ್ತಿದ್ದೀರಿ. ಮಧ್ಯಾಹ್ನ ಅದನ್ನು ಪ್ರಕಟಿಸುತ್ತೀರಿ.

(ಗೊಂದಲ)

ಶ್ರೀ ಸುರೇಶ್‌ಕುಮಾರ್ : ಹೌದ್ರಿ. ಇಡೀ ಹೌಸ್‌ಗೆ ಗೊತ್ತು. ಇಡೀ ಹೌಸ್‌ಗೆ ಗೊತ್ತು. ನೀವು ಕೇವಲ ರೇವಣ್ಣನವರ ಮಾತನ್ನು ಮಾತ್ರ ಕೇಳುತ್ತೀರಿ. ಅದೇ ಪ್ರಾಬ್ಲಂ. ನೀವು ಸ್ಪೀಕರ್ ಮಾತನ್ನೂ ಕೂಡ ಕೇಳಿ. ತಾವು ಬೇಕಾದರೆ ರೆಕಾರ್ಡ್ ನೋಡಿ. ಸನ್ಮಾನ್ಯ ಸಭಾಧ್ಯಕ್ಷರೆ, ನಾನು ಒಂದು ಪಾಯಿಂಟ್ ಆಫ್ ಆರ್ಡರ್ ಎತ್ತಿದೆ. ಯಾವ ಪ್ರಾವಿಷನ್‌ನಲ್ಲಿ ಎಂದು ನನಗೇನೂ ಗೊತ್ತಿಲ್ಲ. ಅದಕ್ಕೂ ಒಂದು ರೂಲಿಂಗ್‌ನ್ನು ಕೊಟ್ಟಿದ್ದೀರಿ. ನಾನು ಈಗ I am on point of order.

Rule No.347 : "The Speaker may, direct any member whose conduct is, in his opinion gross, disorderly to withdraw immediately from the House, and any member so ordered to withdraw shall do so forthwith and shall absent himself during the remainder of the day's sitting."

ಇದನ್ನು ನಾನು ಬಹಳ ನೊಂದ ಮನಸ್ಸಿನಿಂದ ಈ ಒಂದು ರೂಲ್‌ನ್ನು ಕೋಟ್ ಮಾಡುತ್ತಿದ್ದೇನೆ ಸ್ವಾಮಿ.

(ಗೊಂದಲ)

ಅಧ್ಯಕ್ಷರು : ನಾನು ಬಾವಿಯಲ್ಲಿರುವ ಎಲ್ಲ ಸದಸ್ಯರಲ್ಲಿ ವಿನಂತಿ ಮಾಡುತ್ತಿದ್ದೇನೆ. ದಯವಿಟ್ಟು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು : ಬಾವಿಯಲ್ಲಿ ನಿಂತು ಮರು ಪರಿಶೀಲನೆ ಮಾಡಿ ಎಂದರೆ ಹೇಗೆ? ಅಲ್ಲಿ ಹೋಗಿ ಮೊದಲು ಕುಳಿತುಕೊಳ್ಳಿ. ಬಾವಿಯಲ್ಲಿ ನಿಂತು ಕೇಳುವುದಲ್ಲ.

(ಗೊಂದಲ)

ಶ್ರೀ ಸುರೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ನಿಯಮ 347 ರಲ್ಲಿ ಹೇಳಿರುವಂತೆ ಮಾನ್ಯ ಅಧ್ಯಕ್ಷರು ಯಾವ ಸದಸ್ಯರ ನಡವಳಿಕೆಯು ತುಂಬಾ ಅಸಭ್ಯವಾಗಿದೆಯೆಂದು ಭಾವಿಸುತ್ತಾರೋ, ಅಂಥ ಸದಸ್ಯರಿಗೆ ಸದನದಿಂದ

ಕೂಡಲೇ ಹೊರಗೆ ಹೋಗುವಂತೆ ಆದೇಶಿಸಬಹುದು ಮತ್ತು ಆ ರೀತಿ ಹೋಗಬೇಕೆಂದು ಆದೇಶ ಮಾಡಿದ ಯಾರೇ ಸದಸ್ಯರು ಕೂಡಲೇ ಸಭೆಯಿಂದ ಹೊರಗೆ ಹೋಗಬೇಕು ಮತ್ತು ಆ ದಿನದ ಉಪವೇಶನದ ಉಳಿದ ಸಮಯದಲ್ಲಿ ಅವರು ಗೈರುಹಾಜರಾಗತಕ್ಕದ್ದು. ಇನ್ನು ನಿಯಮ 348 ರಲ್ಲಿ ಏನು ಹೇಳಲಾಗಿದೆಯೆಂದರೆ, (1) ಅಧ್ಯಕ್ಷರು ತಾವು ಅವಶ್ಯವೆಂದು ಭಾವಿಸಿದ ಪಕ್ಷದಲ್ಲಿ ಯಾವ ಸದಸ್ಯರು ಅಧ್ಯಕ್ಷರ ಅಧಿಕಾರದ ವಿಷಯದಲ್ಲಿ ಲಕ್ಷ್ಯವಿಲ್ಲದೆ ತಿರಸ್ಕಾರ ಮಾಡುತ್ತಾರೋ ಅಥವಾ ಸದನದ ಕಾರ್ಯಕಲಾಪಗಳಿಗೆ ಒಂದೇ ಸಮನಾಗಿ ಮತ್ತು ಉದ್ದೇಶಪೂರ್ವಕವಾಗಿ ಅಡಚಣೆಯನ್ನುಂಟು ಮಾಡುವುದರ ಮೂಲಕ ಸದನದ ನಿಯಮಗಳಿಗೆ ವಿರೋಧವಾಗಿ ವರ್ತಿಸುತ್ತಾರೋ ಆ ಸದಸ್ಯರ ಹೆಸರೆತ್ತಿ ಸದನಕ್ಕೆ ತಿಳಿಸಬಹುದು. ಇನ್ನು ಮುಂದಕ್ಕೆ ಏನಿದೆಯೆಂದರೆ (2) ಆ ರೀತಿ, ಅಧ್ಯಕ್ಷರು ಒಬ್ಬ ಸದಸ್ಯರ ಹೆಸರೆತ್ತಿ ತಿಳಿಸಿದ ಪಕ್ಷದಲ್ಲಿ ಆ ಕೂಡಲೇ ಅವರು ಹೆಸರೆತ್ತಿ ತಿಳಿಸಿದ ಸದಸ್ಯರು ಅಧಿವೇಶನದ ಉಳಿದ ಕಾಲದಲ್ಲಿ (ಅಥವಾ ಅಧ್ಯಕ್ಷರು ನಿರ್ದಿಷ್ಟಗೊಳಿಸಬಹುದಾದಂಥ ಅಧಿವೇಶನದ ಒಂದು ಭಾಗದವರೆಗೆ) ಸದನಕ್ಕೆ ಬರಬಾರದಂತೆ ಪ್ರಸ್ತಾವವನ್ನು ಮಂಡಿಸಬಹುದು.

(ಗೊಂದಲ)

ಶ್ರೀ ಸುರೇಶ್‌ಕುಮಾರ್ : ನಾನು ಯಾವತ್ತೂ ಹೀಗೆ ಮಾಡಿರಲಿಲ್ಲ ಸ್ವಾಮಿ. ನಮ್ಮ ನಾಯಕರು ಈ ರೀತಿ ಹೇಳಿಕೊಡಲೇ ಇಲ್ಲ. ನಾವು ಚರ್ಚೆಯಲ್ಲಿ ಭಾಗವಹಿಸುತ್ತಿದ್ದೆವು.

(ಗೊಂದಲ)

ಅಧ್ಯಕ್ಷರು : ಕಡೆಯದಾಗಿ ವಿನಂತಿ ಮಾಡುತ್ತಿದ್ದೇನೆ. ಬಾವಿಯಲ್ಲಿರುವ ಸದಸ್ಯರು ದಯವಿಟ್ಟು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಬೇಕು ಮತ್ತು ಸದನ ನಡೆಯಲು ಸಹಕರಿಸಬೇಕು.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):– ಸಭಾಧ್ಯಕ್ಷರ ರೂಲಿಂಗ್ ನಂತರ ಅದನ್ನು ಪ್ರಶ್ನಿಸಿ ಈ ರೀತಿ

ಧರಣಿ ಮಾಡುವುದು ಸರಿಯಲ್ಲ. ಸಭಾತ್ಯಾಗ ಮಾಡಿ ಹಿಂದೆ ಹೋಗಿರಬಹುದು. ಇವರು ಧರಣಿ ಮಾಡುತ್ತಿರುವುದರಿಂದ ಸಭಾಧ್ಯಕ್ಷರ ಪೀಠಕ್ಕೆ ಮಾಡಿದ ಅವಮಾನವಾಗುತ್ತದೆ. ವಿರೋಧ ಪಕ್ಷದಲ್ಲಿರುವ ಜೆ.ಡಿ.(ಎಸ್) ಪಕ್ಷದ ನಾಯಕರುಗಳಿಗೆ ಈ ಸದನದ ಘನತೆ ಗೌರವ ಕಾಪಾಡಿಕೊಳ್ಳುವಂಥದ್ದರ ಬಗ್ಗೆ ಸಾಮಾನ್ಯ ವಿಚಾರವನ್ನು ತಿಳಿದುಕೊಂಡಿಲ್ಲ. ಮಾನ್ಯ ಅಧ್ಯಕ್ಷರಾದ ತಮ್ಮ ತೀರ್ಮಾನವನ್ನು ಪ್ರಶ್ನಿಸುವಂಥ ಮತ್ತು ಅದನ್ನು ವಿರೋಧಿಸಿ ಧರಣಿ ಮಾಡುವಂಥದ್ದು ಈ ವ್ಯವಸ್ಥೆಗೆ ಶೋಭೆ ತರುವುದಿಲ್ಲ.

(ಗೊಂದಲ)

(ಶ್ರೀ ಹೆಚ್.ಸಿ. ಬಾಲಕೃಷ್ಣರವರು ಮಾತ್ರ ತಮ್ಮ ಸ್ಥಾನಕ್ಕೆ ತೆರಳಿದರು)

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ನಮ್ಮ ಮೇಲೆ ತಪ್ಪು ಆಪಾದನೆಯಾಗಿದೆ. ಮುಖ್ಯಮಂತ್ರಿಗಳು ನೋಟೀಸ್ ಕೊಡದೆ ನಮ್ಮ ಮೇಲೆ ಆಪಾದನೆಯನ್ನು ಮಾಡಿದ್ದಾರೆ. ಆದುದರಿಂದ ನಾವು ನಿಯಮ 60 ರಡಿಯಲ್ಲಿ ಕಾನೂನು ಸಚಿವರು ಹೇಳಿದ ರೀತಿಯಲ್ಲಿ ಚರ್ಚೆಗೆ ನಾವು ಅವಕಾಶವನ್ನು ಕೇಳಿದ್ದೇವೆ. ಇದರ ಮೇಲೆ ನಮಗೆ ಚರ್ಚೆಗೆ ಅವಕಾಶವನ್ನು ಮಾಡಿಕೊಡಿ. ನಿಮ್ಮ ತೀರ್ಪನ್ನು ಪುನರ್ ಪರಿಶೀಲನೆ ಮಾಡಿ. ನಿಮ್ಮ ತೀರ್ಪನ್ನು ಪುನರ್ ಪರಿಶೀಲನೆ ಮಾಡಿ ನಮಗೆ ಸದನದಲ್ಲಿ ಮಾತನಾಡುವುದಕ್ಕೆ ಅವಕಾಶವನ್ನು ಮಾಡಿಕೊಡಿ.

ಅಧ್ಯಕ್ಷರು : ನಾನು ಕೊನೆಯದಾಗಿ ಬಾವಿಯಲ್ಲಿರುವ ಸದಸ್ಯರಲ್ಲಿ ವಿನಂತಿಯನ್ನು ಮಾಡುತ್ತಿದ್ದೇನೆ. ದಯವಿಟ್ಟು ತಮ್ಮ ತಮ್ಮ ಸ್ಥಾನಗಳಿಗೆ ತೆರಳಿ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ನಿಮ್ಮ ತೀರ್ಪನ್ನು ಪುನರ್ ಪರಿಶೀಲಿಸಿ.

ಅಧ್ಯಕ್ಷರು : ನಾನು ಮಾತನಾಡುತ್ತಿರುವಾಗ ನೀವೇಕೆ ಮಧ್ಯ ಮಧ್ಯ ಮಾತನಾಡುತ್ತೀರಿ. This is not the way Mr. Balakrishna.

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ನಿಮ್ಮ ತೀರ್ಪನ್ನು ದಯಮಾಡಿ ಪುನರ್ ಪರಿಶೀಲನೆ ಮಾಡಿ. ನಮ್ಮ ಮೇಲೆ ನೇರವಾದಂಥ ಆಪಾದನೆ ಇದೆ. ಈ ಆಪಾದನೆಯಿಂದ ನಾವು ದೂರವಾಗಬೇಕು.

ದಯಮಾಡಿ ಇಲ್ಲಿ ನಮಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ನಾವು ನಿಯಮ 60 ರಡಿಯಲ್ಲಿ ಅವಕಾಶ ಕೊಡಬೇಕೆಂದು ನಿಮಗೆ ಕೇಳಿದ್ದೇವೆ. ನಿನ್ನೆ ಕಾನೂನು ಸಚಿವರು . .

ಅಧ್ಯಕ್ಷರು : ನೋಡಿ, ಬಾವಿಯಲ್ಲಿರುವ ಸದಸ್ಯರಿಗೆ ಕೊನೆಯದಾಗಿ ಹೇಳುತ್ತಿದ್ದೇನೆ, ತಾವು ದಯವಿಟ್ಟು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಸಹಕರಿಸಿ. ತಾವೇನು ಪ್ರಸ್ತಾಪ ಮಾಡಿದ್ದೀರಿ, ಆ ಬಗ್ಗೆ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಎಲ್ಲವನ್ನೂ ಹೇಳುವುದಕ್ಕೆ ಅವಕಾಶವಿದೆ. ಮಧ್ಯದಲ್ಲಿ ತಾವು ಮಾತನಾಡಬೇಡಿ. ನಾನು ಈಗ ವಿನಂತಿಯನ್ನು ಮಾಡುತ್ತಿದ್ದೇನೆ. ನೀವು ತಮ್ಮ ಸ್ಥಾನಗಳಿಗೆ ಹೋಗದಿದ್ದರೆ I have to name. There is no alternate.

(ಗೊಂದಲ)

ಅಧ್ಯಕ್ಷರು : ನಾನು ಸದನದ ಬಾವಿಯಲ್ಲಿರುವ ಸದಸ್ಯರಿಗೆ ಮತ್ತೆ ಮತ್ತೆ ನಾನು ವಿನಂತಿಯನ್ನು ಮಾಡುತ್ತಿದ್ದೇನೆ. ದಯವಿಟ್ಟು ತಾವುಗಳು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಸದನದ ಕಾರ್ಯಕಲಾಪಗಳು ಸುಸೂತ್ರವಾಗಿ ನಡೆಯುವುದಕ್ಕೆ ಸಹಕರಿಸಿ. ನೀವು ಹೋಗದಿದ್ದರೆ ನಾನು ನಿಮ್ಮ ಹೆಸರುಗಳನ್ನು ಸದನದಲ್ಲಿ ಓದಬೇಕಾಗುತ್ತದೆ. ನಾನು ತಮ್ಮಲ್ಲಿ ಮತ್ತೆ ಮತ್ತೆ ವಿನಂತಿಯನ್ನು ಮಾಡುತ್ತಿದ್ದೇನೆ. ದಯವಿಟ್ಟು ಸಹಕರಿಸಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಈಗ ಅವರ ಬೇಡಿಕೆ, ಯಾವುದೇ ಒಂದು adjournment motion ತಂದಂಥ ಸಂದರ್ಭದಲ್ಲಿ ಆ ಬಗ್ಗೆ ನೀವು ಕಾಲವನ್ನು ನಿಗದಿ ಮಾಡಬೇಕಾಗುತ್ತದೆ. ನಿಗದಿ ಮಾಡತಕ್ಕಂಥದ್ದು ಅಥವಾ ಬಿಡತಕ್ಕಂಥದ್ದು ಅದು ನಿಮಗೆ ಬಿಟ್ಟಂಥ ಪ್ರಶ್ನೆ. ಆದರೆ ಇಲ್ಲೇನಾಗಿದೆಯೆಂದರೆ, ನೀವೇನು ಆ ಕುರ್ಚಿಯಿಂದ ಕುಳಿತು ನಿರ್ಣಯವನ್ನು ನೀವು ಮಾಡುತ್ತಿದ್ದೀರಿ ಅದರ ಕಮ್ಯುನಿಕೇಷನ್ ಸರಿಯಾಗಿ ಆಗುತ್ತಿಲ್ಲ. ಅದರಲ್ಲಿ ಆ ಲೋಪದೋಷವಾಗಿರತಕ್ಕಂಥ ಮದ್ಯದಲ್ಲಿ ಸಂಸದೀಯ ವ್ಯವಹಾರಗಳ ಸಚಿವರು ಒಂದು ಪ್ರಾವಿಷನ್‌ನ್ನು ಕೂಡ

ಕೋಟ್ ಮಾಡಿ ಹೇಳುತ್ತಾರೆ. ಅಂದರೆ ಸದಸ್ಯರನ್ನು ಹೊರಗೆ ಇಟ್ಟು ಸದನ ನಡೆಸಬೇಕು ಎಂದು . . .

ಶ್ರೀ ಸುರೇಶ್‌ಕುಮಾರ್ : ನಾನು ಆ ರೀತಿ ಹೇಳಲಿಲ್ಲ.

ಶ್ರೀ ಟಿ.ಬಿ. ಜಯಚಂದ್ರ : ಸ್ವಲ್ಪ ತಾಳಿ ನಾನು ಹೇಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರು ಒಂದು ಬಾರಿ ರೂಲಿಂಗ್ ಕೊಟ್ಟ ಮೇಲೆ ಅದನ್ನು ಪ್ರಶ್ನೆ ಮಾಡಿ ಸದನದ ಬಾವಿಗೆ ಬರುವುದು ಸರಿಯೆ? ಒಂದು ಸಾರಿ ಸಭಾಧ್ಯಕ್ಷರು ನಿರ್ಣಯವನ್ನು ಕೊಟ್ಟಿದ್ದಾರೆ. ಕೊಟ್ಟಮೇಲೆ ಅದಕ್ಕೆ ಅಗೌರವ ಬರುವ ರೀತಿಯಲ್ಲಿ ಬಾವಿಗೆ ಬರುವುದು ಸರಿಯೆ? ಇದನ್ನು ನೀವು ಒಪ್ಪಿಕೊಳ್ಳುತ್ತೀರೋ? ಸಭಾಧ್ಯಕ್ಷರ ಪೀಠಕ್ಕೆ ಅಗೌರವ ಕೊಟ್ಟಂತಾಗುತ್ತದೆ. ಇದು ಒಳ್ಳೆಯ ನಡತೆಯಲ್ಲ. ಅದಕ್ಕೋಸ್ಕರವಾಗಿಯೇ ಸಂಸದೀಯ ಸಚಿವರಾದ ಸುರೇಶ್‌ಕುಮಾರ್‌ರವರು ಅದರ ಸಲುವಾಗಿಯೇ ಕೋಟ್ ಮಾಡಿ ಹೇಳಿದರು. ಈ ರೀತಿ ಸಭಾಧ್ಯಕ್ಷರ ರೂಲಿಂಗನ್ನೇ ಪ್ರಶ್ನಿಸಿ ಪದೇ ಪದೇ ಅಗೌರವ ಕೊಡುತ್ತಿದ್ದರೆ ಈ ಸದನ ನಡೆಸುವುದಾದರೂ ಹೇಗೆ ಹೇಳಿ. ನೀವು ಮಾತನಾಡಬೇಕು, ಬೇರೆ ಸದಸ್ಯರು ಮಾತನಾಡಬೇಕು. ಹಲವಾರು ವಿಷಯಗಳನ್ನು ಚರ್ಚೆ ಮಾಡಬೇಕಾಗಿದೆ. ನಾವು ಕೇವಲ ಒಂದೇ ವಿಷಯದ ಬಗ್ಗೆ ಚರ್ಚೆ ಮಾಡಬೇಕಾಗಿದೆಯೇ ಹೇಗೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ರಾಜ್ಯದ ಜನ ಸದನದ ಎಲ್ಲಾ ಕಾರ್ಯಕಲಾಪಗಳನ್ನು ಗಮನಿಸುತ್ತಿದ್ದಾರೆ. ಬಹಳ ದಿವಸಗಳ ನಂತರ ಅಧಿವೇಶನ ನಡೆಯುತ್ತಿದೆ. ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಚರ್ಚೆಯ ಸಂದರ್ಭದಲ್ಲಿ ಏನು ಬೇಕಾದರೂ ಮಾತನಾಡುವುದಕ್ಕೆ ಸಂಪೂರ್ಣವಾದ ಅವಕಾಶವಿದೆ. ನೀವು ಆಗ ಚರ್ಚೆಗೆ ಅವಕಾಶವನ್ನು ಕೊಡುತ್ತೇನೆಂದು ಒಪ್ಪಿಕೊಂಡಿದ್ದೀರಿ. ಇಷ್ಟಾದರೂ ವೆಲ್‌ಗೆ ಬಂದು ಕಳೆದ ಒಂದು ಗಂಟೆಯಿಂದ ಕಾರ್ಯಕಲಾಪವನ್ನು ತಡೆಯುವುದನ್ನು ನಾವ್ಯಾರು ಸಹಿಸುವುದಕ್ಕೆ ಸಿದ್ಧವಿಲ್ಲ. ಬೇರೆ ಎಲ್ಲ ಸದಸ್ಯರ ಹಕ್ಕನ್ನು ಕಿತ್ತುಕೊಳ್ಳುವುದಕ್ಕೆ ಕೆಲವರಿಗೆ ಅಧಿಕಾರ ಇಲ್ಲ. ನಿಯಮಾವಳಿ ಪ್ರಕಾರ ನೀವು ಕ್ರಮವನ್ನು

ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಗೌರವಾನ್ವಿತವಾಗಿ ಅವರ ಕುರ್ಚಿ ಮೇಲೆ ಕುಳಿತುಕೊಂಡು ಸಹಕರಿಸಬೇಕಾಗುತ್ತದೆ. ಇಲ್ಲದಿದ್ದರೆ ನಿಯಮಾವಳಿ ಪ್ರಕಾರ ತಾವು ಕ್ರಮ ತೆಗೆದುಕೊಳ್ಳುವುದಕ್ಕೆ ಮುಂದಾಗಬೇಕಾಗುತ್ತದೆ. ನಾನು ಇನ್ನೊಂದು ಬಾರಿ ವಿನಂತಿ ಮಾಡುತ್ತೇನೆ, ಇಲ್ಲಿ ಯಾವುದೇ ವಿಷಯಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಸಂಪೂರ್ಣ ಅವಕಾಶ ಇದೆ. ದಯಮಾಡಿ ಸಹಕರಿಸಿ, ಚರ್ಚೆ ಮಾಡೋಣ. ಈ ರೀತಿ ನೀವು ಸರ್ವಾಧಿಕಾರಿಯಾಗಿ ವರ್ತನೆ ಮಾಡುವಂಥದ್ದು ಮತ್ತು ಪ್ರಜಾತಂತ್ರ ವ್ಯವಸ್ಥೆಯನ್ನು ಕಗ್ಗೊಲೆ ಮಾಡುವಂಥಾದ್ದು, ರಾಜ್ಯದ ಜನರ ಭಾವನೆಗಳಿಗೆ ಸ್ಪಂದಿಸದೆ, ಚರ್ಚೆಯಲ್ಲಿ ಭಾಗವಹಿಸದೆ ಇರುವಂತಹ ನಿಮ್ಮ ಈ ರೀತಿಯ ನಡವಳಿಕೆ ಏನಿದೆ, ಇದನ್ನು ಜನ ಕ್ಷಮಿಸುವುದಿಲ್ಲ, ಇದರಿಂದ ನೀವು ಏನೂ ಲಾಭಗಳಿಸುವುದಕ್ಕಾಗುವುದಿಲ್ಲ. ನಾನು ಸಭಾನಾಯಕರಾಗಿ ಮತ್ತೊಮ್ಮೆ ವಿನಂತಿ ಮಾಡುತ್ತೇನೆ, ದಯಮಾಡಿ ನಿಮ್ಮ ಕುರ್ಚಿಗೆ ಹೋಗಿ ಕುಳಿತುಕೊಳ್ಳಿ, ಸಹಕರಿಸಿ, ಚರ್ಚೆಗೆ ಅವಕಾಶ ಮಾಡಿಕೊಡಿ. ಇನ್ನು ಇದನ್ನು ಸದಸ್ಯರು ಹೆಚ್ಚು tolerate ಮಾಡುವುದಕ್ಕಾಗುವುದಿಲ್ಲ. ಜನ ನಿಮ್ಮನ್ನು ಕ್ಷಮಿಸುವುದಿಲ್ಲ, ನೀವೇನು ಲಾಭ ಮಾಡುವುದಕ್ಕಾಗುವುದಿಲ್ಲ. ನೀವು ಇದರಿಂದ ಏನಾದರೂ ಲಾಭವಾಗುತ್ತದೆಂದು ಭಾವಿಸಿದ್ದರೆ, ಜನ ಈಗ ನಿಮ್ಮನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುತ್ತಾರೆ, ಇದರಿಂದ ನಿಮ್ಮ ಗೌರವ ಏನೂ ಜಾಸ್ತಿಯಾಗುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಜಯಚಂದ್ರರವರೆ, ಮಾನ್ಯ ಅಧ್ಯಕ್ಷರು ಮಧ್ಯಾಹ್ನ ನಾನು ruling ಕೊಡುತ್ತೇನೆಂದು ಹೇಳಿದರು. ಇದರ ಬಗ್ಗೆ ಪರಿಶೀಲನೆ ಮಾಡುತ್ತೇನೆ, ವಿಚಾರ ಮಾಡುತ್ತೇನೆ, ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆ ಕೊಟ್ಟಿದ್ದಾರೆ, ರೇವಣ್ಣನವರು ಹೇಳಿಕೆ ಕೊಟ್ಟಿದ್ದಾರೆ ಅದನ್ನೆಲ್ಲ ಪರಿಶೀಲನೆ ಮಾಡಿ ನಾನು ಮಧ್ಯಾಹ್ನ ರೂಲಿಂಗ್ ಕೊಡುತ್ತೇನೆಂದು ಹೇಳಿದರು. ಅಲ್ಲಿಯವರೆಗೂ tolerate ಮಾಡುವುದಕ್ಕೆ ಇವರು ತಯಾರಿಲ್ಲ. ಈಗ ಸಧ್ಯದಲ್ಲಿಯೇ ಕೊಡಬೇಕು, ಇದೇರೀತಿ ಕೊಡಬೇಕು ಎಂದು ಹೇಳಿದರೆ, ಇದು ಒಳ್ಳೆಯದಲ್ಲ. ಆಮೇಲೆ ಅವರು ರೂಲಿಂಗ್ ಕೊಟ್ಟಮೇಲೆ ಅದೇರೀತಿ ಅವರು ನಡೆದುಕೊಳ್ಳಬೇಕು.

ಅಧ್ಯಕ್ಷರು : Proceedings ತೆಗೆದುನೋಡಿ, ಕೊಟ್ಟಾಯಿತು.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೇ, ಏನು ಲೋಪವಾಗಿದೆ ಎಂದು ನಾವು ಸುಮ್ಮನೆ ಕುಳಿತುಕೊಂಡು ಕೇಳುವುದಕ್ಕೆ ಸಾಧ್ಯವಿಲ್ಲ, ಒಂದು ಗಂಟೆಯಾಯಿತು. ಅವರು ನಿಲುವಳಿ ಸೂಚನೆಯನ್ನು ಕೊಟ್ಟಾಗ ನೀವು ಮೊದಲೇ ನಿಲುವಳಿ ಸೂಚನೆಯನ್ನು ತಿರಸ್ಕಾರ ಮಾಡಿದ್ದೇವೆಂದು ಹೇಳಿದಿರಿ. ಅದಾದಮೇಲೆ ಮಾನ್ಯ ಸಭಾನಾಯಕರು ಎದ್ದು ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ.....

ಅಧ್ಯಕ್ಷರು : Letter.....

ಶ್ರೀ ಬಿ.ಎಸ್. ಯಡಿಯೂರಪ್ಪ : ನನ್ನ ಬಾಯಿಂದ ಬೇರೆ ಹೇಳಿಸಬೇಡಿ. ನಾನು ವಿಷಯ ಹೇಳಿರುವ ಬಗ್ಗೆ ತಾವು ಬೇಕಾದರೆ ರೆಕಾರ್ಡ್ ತೆಗೆಸಿ ನೋಡಿ. ನಾನು ಹೇಳಿದ್ದು ಬೇರೆ ವಿಷಯ, ದಯಮಾಡಿ ನನ್ನ ಬಾಯಿಂದ ಬೇರೆ ಹೇಳಿಸಬೇಡಿ.

ಶ್ರೀ ಟಿ.ಬಿ. ಜಯಚಂದ್ರ : ನಾನು ಹೇಳುವುದನ್ನು ನೀವು ಸ್ವಲ್ಪ ಕೇಳಿ ಸ್ವಾಮಿ. ನೀವು statement ಮಾಡುವುದಕ್ಕೆ ಅವಕಾಶ ಇಲ್ಲವೆನ್ನುವ ವಿಚಾರವನ್ನು ಮಾನ್ಯ ಸುರೇಶ್‌ಕುಮಾರ್‌ರವರೆ ತಾವು ಪ್ರಸ್ತಾಪ ಮಾಡಿದಿರಿ. ತಾವು ಯಾವುದೇ ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ನನ್ನ ಅಭ್ಯಂತರವಿಲ್ಲವೆನ್ನುವ ಮಾತನ್ನು ಹೇಳಿದಿರಿ. ಅದಾದಮೇಲೆ ತಾವು ಏನು ಹೇಳಿದಿರಿ ಎಂದರೆ ಸಭಾನಾಯಕರು ಹೇಳಿರುವುದೆಲ್ಲವನ್ನು ವಿಚಾರ ಮಾಡಿ ಒಂದು ನಿರ್ಣಯ ಕೊಡುತ್ತೇನೆನ್ನುವ ಮಾತನ್ನು ಹೇಳಿದಿರಿ.

ಅಧ್ಯಕ್ಷರು : ಅದಕ್ಕೆ ಅವರು ತಯಾರಿಲ್ಲ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಈಗ ಅವರು demand ಮಾಡುತ್ತಿರುವುದು ಏನು? ನಿನ್ನೆ ಚರ್ಚೆ ನಡೆದಂತಹ ಸಂದರ್ಭದಲ್ಲಿ clarification ಮಾಡುವುದಕ್ಕೆ ಅವಕಾಶ ಕೊಡಲಿಲ್ಲವೆನ್ನುವಂತಹ ಲೋಪವನ್ನು ನಿಮ್ಮ ಮುಂದೆ ಇಟ್ಟಾಗ, ದಯಮಾಡಿ ನಾನು ಹೇಳುವುದು ಏನೆಂದರೆ ತಾವು ಕಾಲವನ್ನು ನಿಗದಿ ಮಾಡಿ, ಕಾಲವನ್ನು ನಿಗದಿ ಮಾಡುವುದಕ್ಕೆ ನೀವು ಬೇರೆ ಏನೂ ಮಾಡಬೇಕಾಗಿಲ್ಲ, ತಾವು ಇವತ್ತೇ

ಮಾಡಬಹುದು ಅಥವಾ ಈಗಲೇ ಮಾಡಬಹುದು. ಇನ್ನೊಂದು ಬಹಳ ಮುಖ್ಯವಾಗಿ ಹೇಳುವುದೇನೆಂದರೆ, ಕಾಲವನ್ನು ನಿಗದಿ ಮಾಡುತ್ತೇನೆಂದು ಪೀಠದಿಂದ ಬಂದಾಗ ಬಹುಶ: ನಾವು ಅದಕ್ಕೆ ಗೌರವವನ್ನು ಕೊಡಬೇಕಾಗುತ್ತದೆ. ಅದಕ್ಕೆ ನಿರ್ದಿಷ್ಟವಾಗಿ ಈಗ ಮಾಡುತ್ತೇನೆ ಅಥವಾ ಆಗ ಮಾಡುತ್ತೇನೆಂದು ಏನಾದರೂ ಒಂದು ನಿರ್ಣಯವನ್ನು ಕೊಡಬೇಕು.

ಅಧ್ಯಕ್ಷರು: ಈಗ ನಿಯಮಾವಳಿ ಪ್ರಕಾರ ಆ statement, ಅವರು ಎತ್ತಿದಂತಹ point of order, ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆ. ಅದನ್ನು ಒಂದಿಷ್ಟು ಪರಿಶೀಲನೆ ಮಾಡುವುದು ಬೇಡವೇ?

ಶ್ರೀ ಟಿ.ಬಿ. ಜಯಚಂದ್ರ : ಮಾಡಬೇಕು.

ಅಧ್ಯಕ್ಷರು : ಪರಿಶೀಲನೆ ಮಾಡಿ ನಾನು ಒಂದು ನಿರ್ಣಯ ಕೊಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಈಗ ಲಾ ಮಿನಿಸ್ಟರ್ ಏನು ವಿಚಾರವನ್ನು ಪ್ರಸ್ತಾಪ ಮಾಡಿದರು ಎಂದರೆ suspension of the members ಎನ್ನುವುದಾದರೆ ....

ಅಧ್ಯಕ್ಷರು : ಅದು Secondary.

ಶ್ರೀ ಟಿ.ಬಿ. ಜಯಚಂದ್ರ : Secondary ಪ್ರಶ್ನೆ ಅಲ್ಲ.

ಶ್ರೀ ಅಮರೇಗೌಡ ಬಯ್ಯಾಪುರ : ಅವರು point of order ಎತ್ತಿ ಹಿಡಿದರು ಎಂದ ಮೇಲೆ ಅದು ಸದಸ್ಯರ ...

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : ಈ ವಿಚಾರವನ್ನು ಪ್ರಸ್ತಾಪ ಮಾಡಿದಾಗ ಸಭೆಯ ಮುಂದೆ ಇರತಕ್ಕಂಥ ವಿಚಾರವಾಗುತ್ತದೆ. ಆ ಕಾರಣಕ್ಕೋಸ್ಕರ ಸಮಗ್ರವಾಗಿರತಕ್ಕಂಥ ರೀತಿಯಲ್ಲಿ, ತೃಪ್ತಿ ಬರತಕ್ಕಂಥ ರೀತಿಯಲ್ಲಿ ತಮ್ಮ ಪೀಠದಿಂದ ಉತ್ತರ ಬರಲಿ.

ಅಧ್ಯಕ್ಷರು : ಅದಕ್ಕೆ ನಾನು ಪರಿಶೀಲನೆ ಮಾಡಿ ತೀರ್ಮಾನ ಕೊಡಬೇಕು. ಏಕಾಏಕಿ ತೀರ್ಮಾನ ಕೊಡಿ ಎಂದರೆ ಹೇಗೆ ಕೊಡುವುದು? ಈಗ ನೀವು ಹೇಳಿದ ಹಾಗೆ ನಿಯಮಾವಳಿ ಬಿಟ್ಟು ಕೆಲಸ ಮಾಡಬೇಕೇ?

ಇನ್ನು ಏಕೆ ಈ ನಿಯಮಾವಳಿ ಪುಸ್ತಕ ಇರುವುದು? ಇದು ಬೇಡ. ಈಗ ಮಾನ್ಯ ಸದಸ್ಯರು ಹೇಳಿದ ಹಾಗೆ ನಾನು ಎಲ್ಲವೂ ಮಾಡಬೇಕಾದರೆ why is this book?

ಶ್ರೀ ಟಿ.ಬಿ. ಜಯಚಂದ್ರ : ನಾನು ತಮಗೆ appeal ಮಾಡುತ್ತಿದ್ದೇನೆ.

ಅಧ್ಯಕ್ಷರು: ಅಲ್ಲ, ಈ book ಏಕೆ? ಬೇಡ. ಅಲ್ಲಿಂದ ಏನೇನು ಹೇಳುತ್ತೀರಿ ಅದನ್ನು ಕೇಳಿಕೊಂಡು ಇಲ್ಲಿಂದ ಮಾಡುತ್ತಿರೋಣ. What is this? No, no, I can't understand. ತಾವು ಹಿರಿಯ ಸದಸ್ಯರು ಈ ರೀತಿ ಹೇಳಿಬಿಟ್ಟರೆ, how to do work?

ಶ್ರೀ ಟಿ.ಬಿ. ಜಯಚಂದ್ರ : ಈಗ ಸಮಗ್ರವಾದಂತಹ ರೀತಿಯಲ್ಲಿ ತೃಪ್ತಿ ಬರುವಂತಹ ರೀತಿಯಲ್ಲಿ ನಿಮ್ಮಿಂದ ಒಂದು ಹೇಳಿಕೆ ಬರಲಿ.

ಅಧ್ಯಕ್ಷರು : ನೋಡಿ ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಜಯಚಂದ್ರರವರೇ, ಮಾನ್ಯ ಅಧ್ಯಕ್ಷರು ಮಧ್ಯಾಹ್ನದವರೆಗೂ ಅವಕಾಶ ಕೊಡಿ ಎಂದು ಹೇಳಿದ್ದರು, ಅದಕ್ಕೆ ಇವರು tolerate ಮಾಡಿಕೊಳ್ಳಲಿಲ್ಲ. ಮಾನ್ಯ Speakerರವರು ಪದೇ ಪದೇ ನಾನು ವಿಚಾರ ಮಾಡಿ ಮಧ್ಯಾಹ್ನ ನಿರ್ಣಯ ಕೊಡುತ್ತೇನೆಂದು ಹೇಳಿದರು. ಅದಕ್ಕೆ ನೀವು ಅವಕಾಶ ಕೊಡಲಿಲ್ಲ. ನೀವು ಪದೇಪದೇ ಇದೇ ರೀತಿ ಏಕೆ ನಡೆದುಕೊಳ್ಳಬೇಕು? ಒಳ್ಳೆಯದಲ್ಲ.

(ಗೊಂದಲ)

ಅಧ್ಯಕ್ಷರು : ಅವರು ಒತ್ತಡವನ್ನು ತಂದರು. I have said that decision. ಅವರ ಹೇಳಿಕೆ ನಿಮಯಾವಳಿ ಪ್ರಕಾರ ಇಲ್ಲ. ಹಾಗಾಗಿ ಅದನ್ನು ಪರಿಶೀಲನೆ ಮಾಡುವುದಕ್ಕೆ ಬರುವುದಿಲ್ಲ, ಅದಕ್ಕೆ ಅದನ್ನು ತಿರಸ್ಕಾರ ಮಾಡಿದ್ದೇನೆಂದು I have already taken a decision. ಅದನ್ನು ಮತ್ತೆ revive ಮಾಡಬೇಕೆಂದು ಏನಿಲ್ಲ. ಮಾಡುವುದಕ್ಕಾಗುವುದಿಲ್ಲ.

ಮಾನ್ಯ ಸದಸ್ಯರು : ಸದಸ್ಯರನ್ನು ವಜಾ ಮಾಡಿ.

ಅಧ್ಯಕ್ಷರು : ನಾನು ಮತ್ತೊಮ್ಮೆ ವಿನಂತಿಯನ್ನು ಮಾಡುತ್ತೇನೆ. ದಯವಿಟ್ಟು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ತಾವೇನು ಹೇಳಬೇಕಿದೆ,

ಅದನ್ನು ರಾಜ್ಯಪಾಲರ ಭಾಷಣದಲ್ಲಿ ಹೇಳುವುದಕ್ಕೆ ಪೂರ್ಣ ಅವಕಾಶವನ್ನು ಕೊಡುತ್ತೇನೆ, ಚರ್ಚೆ ಮಾಡಿ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ನನಗೆ ಅನಿಸಿದ ಮಟ್ಟಿಗೆ ಸದನವನ್ನು ನಡೆಸುವಂಥಾದ್ದು ಚರ್ಚೆ ನಡೆಸುವಂಥಾದ್ದು ಇವರಿಗೆ ಬೇಕಾಗಿಲ್ಲ. ಸಾಕಷ್ಟು ವಿಷಯಗಳು ಬಗ್ಗೆ ಚರ್ಚೆ ಇದೆ. ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಸಾಕಷ್ಟು ವಿಷಯಗಳನ್ನು ಚರ್ಚೆ ಮಾಡಬಹುದು. ಇವೆಲ್ಲ ಅವಕಾಶವಿದ್ದಾಗ ಉಳಿದ ಎಲ್ಲಾ ಶಾಸಕರು ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡುವುದಕ್ಕೆ ಬಹಳಷ್ಟು ಆಸಕ್ತಿ ಹೊಂದಿದ್ದಾರೆ. ಸಾಕಷ್ಟು calling attention ಇವೆ. ಕುಡಿಯುವ ನೀರಿನ ಸಮಸ್ಯೆ ಇದೆ, ಮತ್ತೊಂದು ವಿಷಯಗಳ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದಾರೆ. ಇಂಥಾದ್ದರಲ್ಲಿ ಪದೇ ಪದೇ ಒಂದೇ ವಿಷಯವನ್ನು ....

ಅಧ್ಯಕ್ಷರು : ನಾನು ಪದೇ ಪದೇ ಕೊನೆಯದಾಗಿ ಪ್ರಾರ್ಥನೆ ಮಾಡುತ್ತೇನೆ, ದಯವಿಟ್ಟು ತಮ್ಮ ಸ್ಥಾನಗಳಿಗೆ ....

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ತಾವು ಒಮ್ಮೆ ಪುನರ್ ಪರಿಶೀಲನೆ ಮಾಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ತಾವು ಆ ರೀತಿಯಲ್ಲಿಯೇ ಮಾರ್ಗದರ್ಶನ ಮಾಡಿ ಎಂದು ಅವರಿಗೆ ನಮ್ಮ ವಿನಂತಿ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ವಿರೋಧ ಪಕ್ಷದ ನಾಯಕರು ಜಂಟಿ ಅಧಿವೇಶನ ಆದಮೇಲೆ ತಕ್ಷಣವೇ ಮಾತನಾಡಬೇಕು. ಯಾವಾಗಲೂ ನಾವು ಹಿಂದಿನ ಸಂಪ್ರದಾಯ ನೋಡಿದ್ದೇವೆ. ಒಂದು ಬಾರಿ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾನ್ಯ ರಾಜ್ಯಪಾಲರು ಭಾಷಣ ಮಾಡಿದಮೇಲೆ ...

ಶ್ರೀ ಸಿದ್ದರಾಮಯ್ಯ : ನಾವು ತಯಾರಾಗಿ ಬಂದಿದ್ದೇವಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಹೌದು, ಯಾವಾಗ ಮಾತನಾಡುತ್ತಾರೆ? ಇವತ್ತು ಮತ್ತು ನಾಳೆ ಮಾತನಾಡುತ್ತಾರೆ. ಈಗ ಒಂದು ನಿಲುವಳಿ ಸೂಚನೆ ತೆಗೆದುಕೊಂಡು ಬಂದರು, ಯಾವುದೋ ಒಂದು statement ಮಾಡಿದರು.

ಮಾನ್ಯ ಸಭಾಧ್ಯಕ್ಷರು ruling ಕೊಟ್ಟರು. ಆ ruling challenge ಮಾಡಿ wellಗೆ ಬರುವುದು. ಇದು ಪದ್ಧತಿಯೇ? ಇದು ಸದನಕ್ಕೆ ಗೌರವ ತರುತ್ತದೆಯೇ? ಇದು ಸರಿಯಲ್ಲ. ಹೀಗಾಗಿ ಇವತ್ತು ನಿಯಮ ಇವೆ. ಮಾನ್ಯ ರೇವಣ್ಣನವರು ಇದೇ ವಿಷಯದ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಮಾತನಾಡಬಹುದಿತ್ತು. ಅಲ್ಲಿ ಅದನ್ನು ಉಪಯೋಗ ತೆಗೆದುಕೊಳ್ಳಬಹುದಿತ್ತಲ್ಲ. ಹಿಂದೆ ಇದೇ ಸದನದಲ್ಲಿ ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಇಂತಹ ವಿಷಯಗಳನ್ನು ಪ್ರಸ್ತಾಪಿಸಿದ್ದು, ಈಗ ಹಲವಾರು ವಿಷಯಗಳು ಇವೆ, ಆ ವಿಷಯಗಳನ್ನು ನೀವು ಪ್ರಸ್ತಾಪ ಮಾಡಬಹುದಿತ್ತು, ಸಾಕಷ್ಟು ಅವಕಾಶಗಳಿವೆ. ಮೊದಲು ಮಾನ್ಯ ವಿರೋಧ ಪಕ್ಷದ ನಾಯಕರು ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮೊದಲು ಮಾತನಾಡಬೇಕಾಗಿತ್ತು. ಇನ್ನೂವರೆಗೂ ನಿಮ್ಮ ಭಾಷಣ ಪ್ರಾರಂಭವಾಗಲಿಲ್ಲ. ಇನ್ನು ಉಳಿದಂತಹ ಯಾವ ಸದಸ್ಯರು ಮಾತನಾಡುವುದಕ್ಕೆ ಆಗಿಲ್ಲ. ಇನ್ನು ಇವತ್ತು ಮತ್ತು ನಾಳೆ ಎರಡು ದಿವಸ ಇದೆ. ನಾಳೆ ವಂದನಾ ನಿರ್ಣಯ ಪಾಸಾಗಬೇಕಾಗಿದೆ. ಇಂತಹ ಸಂದರ್ಭದಲ್ಲಿ ಪದೇ ಪದೇ ಇಂತಹ ವಿಷಯಗಳನ್ನು ತೆಗೆದುಕೊಂಡು ಎಲ್ಲಿಯವರೆಗೆ ನಾವು ಸದನದ ಕಾಲವನ್ನು ಹಾಳು ಮಾಡುವುದು?

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೇ, ಮಾನ್ಯ ಜಗದೀಶ್ ಶೆಟ್ಟರ್‌ರವರ ಕಳಕಳಿ ನನಗೆ ಅರ್ಥವಾಗುತ್ತದೆ. ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯ ಇಲ್ಲಿ ಪಾಸಾಗಬೇಕು. ಅದರ ಬಗ್ಗೆ ಎರಡನೇ ಮಾತಿಲ್ಲ, ನೀವು ಮಂಡಿಸಿದ ಮೇಲೆ ನಾವು ಮಾತನಾಡುವುದಕ್ಕೆ ತಯಾರಾಗಿದ್ದೇವೆ. ನಮ್ಮ ಸ್ನೇಹಿತರು ಕೂಡ ತಯಾರಾಗಿದ್ದಾರೆ. ಜೆಡಿಎಸ್‌ನವರು ಕೂಡ ತಯಾರಾಗಿದ್ದಾರೆ. ನಾನು ನಿಮ್ಮಲ್ಲಿ ಒಂದು ಮನವಿ ಏನು ಮಾಡುತ್ತೇನೆಂದರೆ ನಿನ್ನೆ ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡುವಾಗ ಅವರ ಮೇಲೆ ಕೂಡ ಒಂದು ಆರೋಪ ಆಗಿಬಿಟ್ಟಿದೆ. ಅವರೂ ಕೂಡ ಮಂತ್ರಿಗಳಾಗಿದ್ದಾಗ ಅವರ ಕಾಲದಲ್ಲಿ ಕೂಡ ಕಲ್ಲಿದ್ದಲು ಕೊಂಡುಕೊಳ್ಳುವುದರಲ್ಲಿ ಅವ್ಯವಹಾರವಾಗಿದೆ. ಇವೆರಡನ್ನೂ ಕೂಡ ನಾವು

ಮೋಹನ್ ಕುಮಾರ್‌ರವರ ನ್ಯಾಯಾಂಗ ಆಯೋಗಕ್ಕೆ ವಹಿಸಿಕೊಡುತ್ತೇವೆಂದು ಹೇಳಿದ್ದಾರೆ. ಸದನದಲ್ಲಿ ಅವರು ಸ್ಟೇಟ್‌ಮೆಂಟ್ ಕೊಟ್ಟಿರುವುದರಿಂದ, ಅವರೂ ಒಂದು statement ಮಾಡುವುದಕ್ಕೆ ಅವಕಾಶ ಕೊಟ್ಟಿದ್ದರೆ ಚೆನ್ನಾಗಿ ಇರುತ್ತಿತ್ತು ಎಂದು ಅನಿಸುತ್ತದೆ. ಏಕೆಂದರೆ ಆ ಕಾಲದಲ್ಲಿ ಅವರೇ ವಿದ್ಯುತ್ ಮಂತ್ರಿಯಾಗಿದ್ದವರು. ಅವರು Energy Minister ಆಗಿದ್ದರಿಂದ, ಇದು ಅವರ ಮೇಲೆ ನೇರವಾಗಿ ಆರೋಪ ಇದೆ. ಮುಖ್ಯಮಂತ್ರಿಗಳು ಯಾರಾದರೂ ಇರಲಿ, ಏನಾದರೂ ಇರಲಿ, ನೀವಿದ್ದಾಗ ಮಾಡಿದ್ದೀರಿ ಎಂದು ಹೇಳಿದ್ದಾರೆ. ಅವರ ಮೇಲೂ ಕೂಡ ಅವರು ಆರೋಪ ಮಾಡಿದ್ದಾರೆ. ನಾವು ಇದನ್ನು CBIಗೆ ವಹಿಸಬೇಕೆಂದು ಒತ್ತಾಯ ಮಾಡಿದ್ದೇವೆ. ನಾವು ಸದನದಿಂದ ನಿನ್ನೆ ಸಂಜೆ ಹೊರಗಡೆ ಹೋದಮೇಲೆ ಸದನವನ್ನು ಮುಂದೂಡಿದ್ದೀರಿ, ಅವರಿಗೆ ಟೈಮ್ ಸಿಕ್ಕಿಲ್ಲ. ಹಾಗಾಗಿ ಅವರಿಗೆ ಯಾವಾಗಲಾದರೂ ಒಮ್ಮೆ ಹೇಳಿಕೆಯನ್ನು ಕೊಟ್ಟು let us start. ಅಜೆಂಡಾ ಪ್ರಕಾರ ನಾವು ಸದನವನ್ನು ನಡೆಸುವುದಕ್ಕೆ ಅವಕಾಶ ಮಾಡಿಕೊಡಬಹುದೆಂದು ನನಗನಿಸುತ್ತದೆ. ಇದು ನನ್ನ ಮನವಿ, ಇದರ ಬಗ್ಗೆ ಮಾನ್ಯ ಸಭಾಧ್ಯಕ್ಷರು ತೀರ್ಮಾನ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ಕೂಡ ರೆಡಿಯಾಗಿದ್ದಾರೆ.

ಅಧ್ಯಕ್ಷರು : ಈಗ ತಾವೇ ಬಹಳ ಸ್ಪಷ್ಟವಾಗಿ ಹೇಳಿದ ಹಾಗೆ ವಿಷಯ Justice Mohan Kumar Commission ಮುಂದೆ ಇದೆ. Can it be raised in the Assembly? ಅದರ ಬಗ್ಗೆ ಚರ್ಚೆ.. ..

ಶ್ರೀ ಸಿದ್ದರಾಮಯ್ಯ : No, no since, ಮಾನ್ಯ ಮುಖ್ಯಮಂತ್ರಿಯವರು ನಿನ್ನೆ ದಿವಸ ಆ ಪದವನ್ನು ಹೇಳದೆ ಹೋಗಿದ್ದರೆ ಮಾನ್ಯ ರೇವಣ್ಣನವರು ಎಂ.ಎ.ಎಂ.ರಾಮಸ್ವಾಮಿಯವರಿಂದ ಕಲ್ಲಿದ್ದಲನ್ನು ತೆಗೆದುಕೊಳ್ಳಲು ತೀರ್ಮಾನ ಮಾಡಿದ್ದರಿಂದ ಒಂದು ಟನ್‌ಗೆ ಒಂದು ಸಾವಿರ ರೂಪಾಯಿಗಳು ರಾಜ್ಯದ ಬೊಕ್ಕಸಕ್ಕೆ ನಷ್ಟವಾಗಿದೆ, ಅನ್ಯಾಯ ನಡೆದಿದೆ, ಇದರಲ್ಲಿ ಭ್ರಷ್ಟಾಚಾರ ನಡೆದಿದೆ, ಒಳ ವ್ಯವಹಾರ ನಡೆದಿದೆಯೆಂದು, ಇವೆಲ್ಲವನ್ನು ಹೇಳಿದ ಮೇಲೆ an opportunity should be given to

him to make a statement, what has happened ಎಂದು. ಅದು ಒಂದು statement ಕೊಟ್ಟು ಬಿಟ್ಟರೆ ಮುಗಿಯುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಸಾಕಷ್ಟು ಅನುಭವವಿರುವವರು, ಮಾನ್ಯ ರೇವಣ್ಣನವರು ಸಚಿವರಾಗಿ ಕೆಲಸ ಮಾಡಿದ್ದಾರೆ. ನಾನು ನಿನ್ನೆ ದಿವಸ ಮಾತನಾಡಿದ ಮೇಲೆ ಸುಮಾರು ಮುಕ್ಕಾಲು ಗಂಟೆ, ಒಂದು ಗಂಟೆಯ ಕಾಲ ಚರ್ಚೆಯಾಗಿದೆ. ಯಾವುದೇ ಸಂದರ್ಭದಲ್ಲಿ ಎದ್ದು ನಿಂತುಕೊಂಡು ಯಾವುದೇ ವಿಷಯದ ಬಗ್ಗೆ ಮಾತನಾಡುವುದು ಬೇಡವೆಂದು ಅವರನ್ನು ನೀವು ತಡೆದಿರೇನು?

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ಒಂದು ನಿಮಿಷ, ನಾನು ಮಾತನಾಡುವುದಕ್ಕೆ ಬಿಡಲು ಹೇಳಿ.

ಅಧ್ಯಕ್ಷರು : ಅವರು ಮಾತನಾಡಲಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಅವರು ಯಾವ ವಿಷಯಗಳನ್ನು ಹೇಳಬೇಕೆಂದು ಇದ್ದರೋ ಅದೆಲ್ಲವನ್ನು ವಿರೋಧ ಪಕ್ಷದ ನಾಯಕರ ಕೈಯಲ್ಲಿ ಕಾಗದಗಳನ್ನು ಕೊಟ್ಟು ಅವರಿಗೆ ಓದಲು ಹೇಳಿ, ನಿಮಗೆ ಜವಾಬ್ದಾರಿಯನ್ನು ಕೊಟ್ಟರು. ನೀವು ಆ ಕೆಲಸವನ್ನು ಮಾಡಿದ್ದೀರಿ. ನಾನು ಹೇಳಿದಂಥ ವಿಷಯಗಳ ಬಗ್ಗೆ ಮಾನ್ಯ ರೇವಣ್ಣನವರಿಗೆ ಯಾವುದೇ ಸಂದರ್ಭದಲ್ಲಿ clarify ಮಾಡಬಾರದೆಂದು, ಅವರ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ನಾವ್ಯಾರು ತಡೆ ಹಿಡಿದಿರಲಿಲ್ಲ. ನೀವು ಮಾತನ್ನೆ ಆಡದಿದ್ದರೆ, ನೀವು ಮಾತನಾಡುವ ಹಾಗೆ ನೋಡಿಕೊಳ್ಳುವ ಜವಾಬ್ದಾರಿ ನಮ್ಮದೇನು? ಅದು ನಿಮ್ಮ ಜವಾಬ್ದಾರಿಯಾಗಿತ್ತು. ನಿನ್ನೆ ಇದ್ದ ಸಮಯವನ್ನು ಉಪಯೋಗ ಮಾಡಿಕೊಂಡು ಯಾವುದೇ ವಿಷಯದ ಬಗ್ಗೆ clarification, ಯಾವುದೇ ಉತ್ತರವನ್ನು ನೀವು ಕೇಳುವುದಕ್ಕೆ ಮತ್ತು ಕೊಡುವುದಕ್ಕೆ ನಿಮಗೆ ಸಂಪೂರ್ಣವಾದ ಸ್ವಾತಂತ್ರ್ಯವಿತ್ತು. ಅದನ್ನು ನೀವು ಮಾಡದೇ ಮಾನ್ಯ ವಿರೋಧ ಪಕ್ಷದ ನಾಯಕರ ಕೈಗೆ ಕಾಗದಗಳನ್ನು ಕೊಟ್ಟು ಓದಿಸಿದ್ದೀರಿ. ಅವರು ಅದನ್ನು ಓದಿದರು, ಅದು ಆದಮೇಲೆ ಸದನ ಕಾರ್ಯಕಲಾಪಗಳು

ಮುಗಿಯಿತು. ಇವತ್ತು ಬಂದು ನೀವು ಹೇಳುವುದರ ಬಗ್ಗೆ ನಾನು statement ಮಾಡುತ್ತೇನೆಂದರೆ, ತಾವು ಈಗಾಗಲೇ ruling ಕೊಟ್ಟಮೇಲೆ, ಇನ್ನು ಬೇರೆ ರೂಪದಲ್ಲಿ ಯಾವುದೇ ವಿಷಯಗಳ ಬಗ್ಗೆ ಚರ್ಚೆಗೆ ಅವಕಾಶವಿದ್ದರೂ ಸಹ ಸುಮಾರು ಒಂದು ಗಂಟೆಯ ಕಾಲ ಕಾರ್ಯಕಲಾಪಗಳನ್ನು ತಡೆದು ಸದನವನ್ನು ತಮ್ಮ controlಗೆ ತೆಗೆದುಕೊಳ್ಳುವಂಥ ಪ್ರಯತ್ನವನ್ನು ಮಾಡಿದರೆ ಇದು ಯಾವ democracy? ಇವರ ಬಗ್ಗೆ ಜನರು ಏನೆಂದುಕೊಳ್ಳುತ್ತಾರೆ? ಇದಕ್ಕಾಗಿ ಸದನದ ಕಾರ್ಯಕಲಾಪಗಳನ್ನು ಮಾಡುತ್ತಿದ್ದೇವಾ? ಇನ್ನು ಅನೇಕ ಪ್ರಮುಖ ವಿಷಯಗಳ ಬಗ್ಗೆ ಚರ್ಚೆಯಾಗಬೇಕು. ಮಾನ್ಯ ರಾಜ್ಯಪಾಲರ ವಂದನಾ ನಿರ್ಣಯದ ಬಗ್ಗೆ ಭಾಷಣ ಆಗಬೇಕಾಗಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಬೆಳಕನ್ನು ಚೆಲ್ಲಬೇಕಾಗಿದೆ. ಆ ರೀತಿ ಕಾರ್ಯಕಲಾಪಗಳಲ್ಲಿ ಭಾಗವಹಿಸುವುದಕ್ಕೆ ಅವರಿಗೂ ಅವಕಾಶವಿದೆ. ಆ ಸಂದರ್ಭದಲ್ಲಿ ಅವರು ಮಾತನಾಡಲಿ, ನಾವು ಅವರನ್ನು ಬೇಡವೆಂದು ತಡೆ ಹಿಡಿದಿಲ್ಲ. ನೀವು ಸಮಯವನ್ನು ಉಪಯೋಗ ಮಾಡಿಕೊಳ್ಳದೆ, ಸಮಯವನ್ನು ವ್ಯರ್ಥ ಮಾಡಿ, ಸದನದ ಸದಸ್ಯರ ಹಕ್ಕನ್ನು ಮೊಟಕುಗೊಳಿಸುವಂಥ ಈ ಪ್ರಯತ್ನ ಏನು ಇದೆ, ಇದಕ್ಕೆ ಯಾವುದೇ ಕಾರಣಕ್ಕೂ ಇಲ್ಲಿ ಅವಕಾಶವನ್ನು ಕೊಡುವುದಕ್ಕೆ ಆಗುವುದಿಲ್ಲ. ಸನ್ಮಾನ್ಯ ಅಧ್ಯಕ್ಷರೆ, ಅವಕಾಶವನ್ನು ಕೊಡಕೂಡದು.

ಅಧ್ಯಕ್ಷರು : ನಾನು ಕೊನೆಯದಾಗಿ ಮತ್ತೆ ಮತ್ತೆ ವಿನಂತಿ ಮಾಡಿಕೊಳ್ಳುತ್ತೇನೆ. ತಾವು ದಯವಿಟ್ಟು ತಮ್ಮ ಸ್ಥಾನಕ್ಕೆ ಹೋಗಿ ಕಲಾಪಗಳನ್ನು ನಡೆಸುವುದಕ್ಕೆ ಸಹಕರಿಸಿ.

ಶ್ರೀ ಹೆಚ್.ಸಿ. ಬಾಲಕೃಷ್ಣ: ಮಾನ್ಯ ಅಧ್ಯಕ್ಷರೆ, ಈಗ ಸಭಾನಾಯಕರು ಸಮಯವನ್ನು ನಿಗದಿ ಮಾಡಿ, ಚರ್ಚೆ ಮಾಡೋಣವೆಂದು ಹೇಳಿದರೂ ಕೂಡ ಅದಕ್ಕೆ ತಾವು ರೂಲಿಂಗ್ ಅನ್ನು ಕೊಟ್ಟಿದ್ದೀರಿ. ನಾವು ನಿಮ್ಮ ರೂಲಿಂಗ್ ಅನ್ನು ಪುನರ್ ಪರಿಶೀಲನೆ ಮಾಡಿಯೆಂದು ಮನವಿ ಮಾಡುತ್ತಿದ್ದೇವೆ. ಇದಕ್ಕೆ ಕಾರಣವೇನೆಂದರೆ ಆಪಾದನೆಯನ್ನು ನೇರವಾಗಿ ನಮ್ಮ ಮೇಲೆ ಮಾಡಿದ್ದಾರೆ, ಮತ್ತೆ ನಿನ್ನೆ ದಿವಸ ನಮಗೆ clarification

ಕೇಳುವುದಕ್ಕೆ ಅವಕಾಶ ಸಿಗಲಿಲ್ಲ. ನಮಗೆ ನೀವು ಅವಕಾಶವನ್ನು ಕೊಡಲಿಲ್ಲ, ಅವಕಾಶವನ್ನು ಕೊಟ್ಟಿದ್ದರೆ ನಾವು ಚರ್ಚೆ ಮಾಡುತ್ತಿರಲಿಲ್ಲವಾ? ನಮ್ಮ ಮೇಲೆ ನೇರವಾಗಿ ಆಪಾದನೆ ಬಂದಿದೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷ ನಾಯಕರು ಎಲ್ಲವನ್ನು ಹೇಳಿದರು. ಅವರ ಮುಖಾಂತರ ಎಲ್ಲಾ ವಿಷಯಗಳನ್ನು ಓದಿಸಿದ್ದಾರೆ. ಅವರೇ ಹೇಳಬಹುದಾಗಿತ್ತು, ನಿಮ್ಮ ಮುಖಾಂತರ ಎಲ್ಲವನ್ನು ಓದಿಸಿದ್ದಾರೆ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ನಾವು ಪುನರ್ ಪರಿಶೀಲನೆ ಮಾಡಿ ಎಂದು ಮನವಿ ಮಾಡಿಕೊಳ್ಳುತ್ತಿದ್ದೇವೆ.

ಶ್ರೀ ಸಿದ್ದರಾಮಯ್ಯ : ಏನು ಹೇಳಿ.

ಅಧ್ಯಕ್ಷರು: ಅವರು ಏನು ಹೇಳಬೇಕೆಂದು ಇದ್ದರೋ, ಅದನ್ನು ತಮ್ಮ ಮುಖಾಂತರ ಹೇಳಿಸಿದರು, ಅದಕ್ಕೆ ನಾನು ಜವಾಬ್ದಾರಿಯಾಗುವುದಿಲ್ಲ.

ಶ್ರೀ ಸಿದ್ದರಾಮಯ್ಯ : ಮಧ್ಯಾಹ್ನ ಅವಕಾಶ ಕೊಡುತ್ತೇವೆಂದು ಹೇಳಿ.

ಅಧ್ಯಕ್ಷರು : ಮಧ್ಯಾಹ್ನದ ನಂತರ ಅವಕಾಶ ಕೊಡಬೇಕೆಂದು ಕೇಳಿದರೆ, ನಾನು ಕೇಳುವುದಕ್ಕೆ ತಯಾರಿಲ್ಲ. ನಾನು ಪರಿಶೀಲನೆ ಮಾಡುತ್ತೇನೆಂದು ಹೇಳಿದರೂ ಒಪ್ಪಲಿಲ್ಲ.

ಶ್ರೀ ಸಿದ್ದರಾಮಯ್ಯ : ಮಧ್ಯಾಹ್ನದ ನಂತರ ಅವಕಾಶ ಕೊಡುತ್ತೇನೆಂದು ಹೇಳಿಬಿಡಿ.

ಡಾ: ಹೆಚ್.ಸಿ. ಮಹದೇವಪ್ಪ : ಅವರಿಗೆ ಮತ್ತೆ ಯಾವಾಗಲಾದರೂ ಅವಕಾಶ ಕೊಡಿ.

ಅಧ್ಯಕ್ಷರು : No, ಸುಮ್ಮನೆ ಸದನದ ಕಾಲ ವ್ಯರ್ಥವಾಗುತ್ತಿದೆ. ನಾನು ಮತ್ತೆ ಮತ್ತೆ final ಆಗಿ request ಮಾಡುತ್ತಿದ್ದೇನೆ. ತಾವುಗಳು ದಯವಿಟ್ಟು ತಮ್ಮ ಸ್ಥಾನಗಳಿಗೆ ಹೋಗಿ ಸದನದ ಕಲಾಪಗಳು ನಡೆಯುವುದಕ್ಕೆ ಸಹಕರಿಸಿ, ಇಲ್ಲದೇ ಹೋದರೆ ಮುಂದಿನ ಕ್ರಮ ಕೈಗೊಳ್ಳಬೇಕಾಗುತ್ತದೆ. ನಾನು ವಿನಂತಿಯನ್ನು ಮಾಡುತ್ತಿದ್ದೇನೆ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ನಾವು ನಿಮಗೆ ಸಹಕಾರ ಕೊಡಲು ಸಿದ್ಧರಿದ್ದೇವೆ. ನಮ್ಮ ಮೇಲೆ ನೇರವಾದ ಆಪಾದನೆ ಇದೆ. ಹೊರಗಡೆ ಮಾಧ್ಯಮಗಳಲ್ಲಿ ತಪ್ಪು ತಿಳುವಳಿಕೆ ಬಂದಿದೆ. ತಾವು ಅದನ್ನು ಪುನರ್ ಪರಿಶೀಲನೆ ಮಾಡಿ.

(ಗೊಂದಲ)

ಡಾ: ಹೆಚ್.ಸಿ. ಮಹದೇವಪ್ಪ : ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಚರ್ಚೆ ನಡೆಯುವಾಗ ಮಧ್ಯದಲ್ಲಿ ಅವರಿಗೆ ಯಾವಾಗಲೋ ಒಂದು ಸಾರಿ clarificationಗೆ ಅವಕಾಶ ಮಾಡಿಕೊಡಿ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಈಗ ಸಭಾಧ್ಯಕ್ಷರು ಸಭಾನಾಯಕರು ಹೇಳಿದ ಹಾಗೆ ಕೇಳುವಂಥ ಅವಶ್ಯಕತೆ ಇಲ್ಲ, ಸಭಾನಾಯಕರು ಹೇಗೆ ಹೇಳುತ್ತಾರೋ ಹಾಗೆ ಸಭಾಧ್ಯಕ್ಷರು ಕೇಳುವಂಥ ಪರಿಸ್ಥಿತಿ ಇವತ್ತು ಬಂತು. ಸಭೆಯನ್ನು ಐದು ನಿಮಿಷಗಳು ಮುಂದೂಡಿ, ಮತ್ತೆ ಪುನರ್ ಪರಿಶೀಲನೆ ಮಾಡಿ.

ಅಧ್ಯಕ್ಷರು : ಕರ್ನಾಟಕ ವಿಧಾನ ಸಭೆಯ .. .. ..

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್ : ಹಾಕಿ. ..

ಶ್ರೀ ಹೆಚ್.ಸಿ. ಬಾಲಕೃಷ್ಣ : ನಿಮ್ಮ ಹಣೆಬರಹವೇ ಅಷ್ಟು, ನಮ್ಮನ್ನು ಆಚೆಗೆ ಹಾಕಿ ಮಾಡಬೇಕು, ಇಲ್ಲದಿದ್ದರೆ ನಿಮ್ಮ ಕೈಯಲ್ಲಿ ಆಗುವುದಿಲ್ಲ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ ಇರಿ, ನೀವು ಈ ರೀತಿ ಮೊದಲೇ ತೀರ್ಮಾನ ಮಾಡಿ order announce ಮಾಡಿಬಿಟ್ಟರೆ ಮತ್ತೆ ನಿಮ್ಮ ಆದೇಶವನ್ನು ನಾವು ಪ್ರಶ್ನೆ ಮಾಡುವುದಕ್ಕೆ ಆಗುವುದಿಲ್ಲ. ತಾವು ದಯವಿಟ್ಟು ಐದು ನಿಮಿಷಗಳ ಕಾಲ ಸಭೆ ಕರೆಯಿರಿ, ಚರ್ಚೆ ಮಾಡೋಣ. ಇದರ ಬಗ್ಗೆ ಏನಾದರೂ ಒಂದು ತೀರ್ಮಾನ ಮಾಡೋಣ. ಮಾನ್ಯ ಮುಖ್ಯಮಂತ್ರಿಯವರೆ, ತಾವು ತಲೆ ಆಡಿಸುತ್ತಾ ಕುಳಿತರೆ ಹೇಗೆ? ನೀವು ಸಭಾನಾಯಕರು.

ಶ್ರೀ ಎಸ್. ಸುರೇಶ್‌ಕುಮಾರ್: ಮಾನ್ಯ ಸಿದ್ದರಾಮಯ್ಯನವರೆ, ಈಗ ಎಲ್ಲಾ ವಿಚಾರಗಳು ನಡೆದಿದೆ. ನಮಗೂ ಎಲ್ಲರನ್ನು ಹೊರಗಡೆ ಕಳುಹಿಸಿ ಸಭೆ ನಡೆಸಬೇಕೆಂಬ ಭಾವನೆ ಇಲ್ಲ. ಸಭೆಯ ಕಲಾಪಗಳು ನಡೆಯಬೇಕು. ಅದಕ್ಕೋಸ್ಕರ ನೀವು ನಮಗೆ ಬುದ್ಧಿವಾದ ಹೇಳುವ ಹಾಗೆ ಮಾನ್ಯ ರೇವಣ್ಣನವರಿಗೂ ಬುದ್ಧಿವಾದವನ್ನು ಹೇಳಿ.

ಶ್ರೀ ಸಿದ್ದರಾಮಯ್ಯ : ಅವರಿಗೂ ಹೇಳೋಣ, ತಾವು ಒಂದು ನಿಮಿಷ ಒಳಗಡೆ ಸಭೆ ಕರೆಯಿರಿ.

ಶ್ರೀ ಎಸ್. ಸುರೇಶ್‌ಕುಮಾರ್ : ನೀವು ಬುದ್ಧಿವಾದ ಹೇಳುವುದೆಲ್ಲಾ ಒಂದೇ directionಗೆ ಇದೆ. one way ಅವರಿಗೂ ಹೇಳಿ.

ಶ್ರೀ ಸಿದ್ದರಾಮಯ್ಯ : ಅವರಿಗೂ ಹೇಳುತ್ತೇನೆ.

ಶ್ರೀ ಎಸ್. ಸುರೇಶ್‌ಕುಮಾರ್ : ನೀವು ಹೇಳುತ್ತಿಲ್ಲ, ನಾನು ಮೊನ್ನೆ ದಿವಸದಿಂದಲೂ ನೋಡುತ್ತಿದ್ದೇನೆ. ನೀವು ಅವರಿಗೆ ಹೇಳುತ್ತಿಲ್ಲ.

ಶ್ರೀ ಸಿದ್ದರಾಮಯ್ಯ : ನೀವು ಒಂದು ನಿಮಿಷ ಸಭೆ ಕರೆಯಿರಿ, ನಾನು ರೇವಣ್ಣನವರಿಗೂ ಹೇಳುತ್ತೇನೆ. ಮಾನ್ಯ ಅಧ್ಯಕ್ಷರೆ, ಅವರ ಕಡೆ ನೋಡಬೇಡಿ, ನಮ್ಮ ಕಡೆ ನೋಡಿಕೊಂಡು ಹೇಳಿ. ಅವರ ಕಡೆ ಏಕೆ ನೋಡುವುದಕ್ಕೆ ಹೋಗುತ್ತೀರಿ, ಬೇಡ. ನಮ್ಮ ಕಡೆ ನೋಡಿಕೊಂಡು ಹೇಳಿ. ಇದು ಸರಿಯಿಲ್ಲ, ಐದು ನಿಮಿಷ ಸಭೆ ಕರೆಯಿರಿ. ಇದು ಹೊಸ ಸಂಪ್ರದಾಯ ಬೇಡ, ನಿಮ್ಮ ಕಾಲದಲ್ಲಿ ಆಗಬಾರದು.

(ಗೊಂದಲ)

ಅಧ್ಯಕ್ಷರು : ನಾನು ಇಷ್ಟು ವಿನಂತಿ ಮಾಡಿದರೂ ಕೇಳುತ್ತಿಲ್ಲ, ಇದು ಸರಿಯಲ್ಲ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಐದು ನಿಮಿಷಗಳ ಕಾಲ ಸಭೆಯನ್ನು ಮುಂದೂಡಿ, ದಯವಿಟ್ಟು ತಾವು ಹೊಸ ಸಂಪ್ರದಾಯವನ್ನು ಹಾಕುವುದಕ್ಕೆ ಆಗುತ್ತದಾ?

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ತಾವು ಸಭೆಯನ್ನು adjourn ಮಾಡಿ, ಆಮೇಲೆ ತೀರ್ಮಾನವನ್ನು ತೆಗೆದುಕೊಳ್ಳೋಣ.

ಅಧ್ಯಕ್ಷರು : ಆಯಿತು, ಈಗ ಸದನವನ್ನು 10 ನಿಮಿಷಗಳ ಕಾಲ ಮುಂದೂಡಲಾಗಿದೆ.

(ಸಭೆಯನ್ನು 10 ನಿಮಿಷಗಳ ಕಾಲ ಮುಂದೂಡಿ ಮತ್ತೆ ಸೇರಲು ತೀರ್ಮಾನಿಸಿತು)

ಸದನವು ಮತ್ತೆ ಮಧ್ಯಾಹ್ನ 12 ಗಂಟೆ 57 ನಿಮಿಷಕ್ಕೆ ಪ್ರಾರಂಭವಾದಾಗ ಸನ್ಮಾನ್ಯ ಸಭಾಧ್ಯಕ್ಷರು ಪೀಠದಲ್ಲಿದ್ದರು.

(ಈ ಸಂದರ್ಭದಲ್ಲಿ ಜೆಡಿಎಸ್ ಪಕ್ಷದ ಸದಸ್ಯರು ಸದನದ ಬಾವಿಯಲ್ಲಿ ಧರಣಿಯಲ್ಲಿ ನಿರತರಾಗಿದ್ದರು.)

ಅಧ್ಯಕ್ಷರು : ಈಗ ಗಮನ ಸೆಳೆಯುವ ಸೂಚನೆ. ಮೊದಲಿಗೆ ಮಾನ್ಯ ಟಿ.ಬಿ.ಜಯಚಂದ್ರರವರದು ಇದೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ತಮ್ಮ ಕಛೇರಿಯಲ್ಲಿ ಚರ್ಚೆಯಾಗಿ ತೀರ್ಮಾನ ತೆಗೆದುಕೊಂಡಿರುವ ವಿಷಯವನ್ನು ಸಭೆಗೆ ಹೇಳಿ.

ಶ್ರೀ ಸಿದ್ದರಾಮಯ್ಯ : ತಾವು ಎಲ್ಲರನ್ನು ಕರೆದು ಈಗಾಗಲೇ ಮಾತನಾಡಿದ್ದೀರಿ. ಆದ್ದರಿಂದ, ದಯಮಾಡಿ ತಾವೆಲ್ಲರೂ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಿ. ಗಮನ ಸೆಳೆಯುವ ಸೂಚನೆ ಮುಗಿದ ನಂತರ ಈ ವಿಷಯ ತೆಗೆದುಕೊಳ್ಳಿ.

ಅಧ್ಯಕ್ಷರು : ಆಯಿತು. ದಯವಿಟ್ಟು ಎಲ್ಲಾ ಮಾನ್ಯ ಸದಸ್ಯರು ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಿ. ಗಮನ ಸೆಳೆಯುವ ಸೂಚನೆಯಾದ ಮೇಲೆ ಅವಕಾಶ ಕೊಡುತ್ತೇನೆ.

(ಈ ಹಂತದಲ್ಲಿ ಜೆಡಿಎಸ್ ಸದಸ್ಯರು ಸದನದ ಬಾವಿಯಿಂದ ತಮ್ಮಗಳ ಸ್ಥಾನಕ್ಕೆ ತೆರಳಿದರು)

ಶ್ರೀ ಎಂ.ಪಿ. ಅಶೋಕ್ : ಮಾನ್ಯ ಅಧ್ಯಕ್ಷರೆ, ನನ್ನದೊಂದು ವಿಷಯ ಇದೆ. ತಾವು ನನಗೆ ಅವಕಾಶ ಕೊಡಬೇಕು.

ಅಧ್ಯಕ್ಷರು : ಆನಂತರ ಅವಕಾಶ ಕೊಡುತ್ತೇನೆ.